# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಸೋಮವಾರ, ಮಾರ್ಚ್ 07, 2022

ಸಂಪುಟ : 48 ಸಂಚಿಕೆ : 296 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 4 ರೂ : 4.00 www.janathavani.com janathavani@mac.com





ದಾವಣಗೆರೆ ವಿನೋಬನಗರದ ಶ್ರೀ ಚೌಡೇಶ್ವರಿ ದೇವಿ ಜಾತ್ರೆ ಪ್ರಯುಕ್ತ ಪಿ.ಬಿ. ರಸ್ತೆ ಅರುಣ ಟಾಕೀಸ್ ಮುಂಭಾಗ ಭಾರೀ ಟಗರಿನ ಕಾಳಗ ಏರ್ಪಡಿಸಲಾಗಿತ್ತು.

# ಬಿಎಸ್‌ವೈಗೆ ಕೆಳದಿ ಶಿವಪ್ಪ ನಾಯಕ ಪ್ರಶಸ್ತಿ ಪ್ರದಾನ

## ಪ್ರಶಸ್ತಿಗೆ ಯಡಿಯೂರಪ್ಪನವರು ಅರ್ಹ ವ್ಯಕ್ತಿ: ಶಾಮನೂರು ಶಿವಶಂಕರಪ್ಪ ಪ್ರಶಂಸೆ

ಶಿವಮೊಗ್ಗ, ಮಾ.6- ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕದ ವತಿಯಿಂದ ಭಾನುವಾರ ಶಿವಮೊಗ್ಗದಲ್ಲಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಮಾಜಿ ಮುಖ್ಯ ಮಂತ್ರಿ ಬಿ.ಎಸ್.ಯಡಿಯೂರಪ್ಪನ ವರಿಗೆ ಕೆಳದಿ ಶಿವಪ್ಪ ನಾಯಕ ಪ್ರಶಸ್ತಿಯನ್ನು ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ಡಾ॥ ಶಾಮನೂರು ಶಿವಶಂಕರಪ್ಪನವರು ನೀಡಿ ಗೌರವಿಸಿದರು.



ಈ ಸಂದರ್ಭದಲ್ಲಿ ಮಾತನಾಡಿದ ಎಸ್ಸೆಸ್, ಕೆಳದಿ ಶಿವಪ್ಪನಾಯಕರು ಉತ್ತಮ ಆಡಳಿತಗಾರರಾಗಿ ಸರ್ವ ಜನಾಂಗಕ್ಕೆ ಅನುಕೂಲವಾಗುವಂತಹ ಆಡಳಿತ ನಡೆಸಿ ಜನಮನ್ನಣೆ ಗಳಿಸಿದ್ದರು. ಕಾಕತಾಳೀಯ ಎಂಬಂತೆ ಇಂದು ಪ್ರತ್ಯೇಕ ರೈತ ಬಜೆಟ್ ಮಂಡಿಸಿ ಸರ್ವ ಜನಾಂಗದ ನಾಯಕ ರಾಗಿರುವ ಯಡಿಯೂರಪ್ಪ ನವರಿಗೆ ಅವರ ಹೆಸರಿನಲ್ಲಿ ಪ್ರಶಸ್ತಿ ಸಂದಿರು ವುದು ಶ್ಲಾಘನೀಯ ಎಂದರು.

ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಗೊ.ರು.ಚನ್ನಬಸಪ್ಪನವರು ಅಭಿನಂದನಾ ನುಡಿಗಳನ್ನಾಡಿದರು. ಪ್ರಶಸ್ತಿ ಸ್ವೀಕರಿಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂ ರಪ್ಪನವರು ಈ ನಾಡಿನ ಜನತೆಯ ವಿಶ್ವಾಸಕ್ಕೆ ಚಿರಋಣಿಯಾಗಿದ್ದೇನೆ ಎಂದರು.

ಸಚಿವ ಕೆ.ಎಸ್.ಈಶ್ವರಪ್ಪ ಮಾತನಾಡಿದರು. ಬೆಕ್ಕಿನ ಕಲ್ಮಠದ ಡಾ॥ ಮಲ್ಲಿಕಾರ್ಜುನ ಮುರುಘ ರಾಜೇಂದ್ರ ಸ್ವಾಮೀಜಿ, ಬಸವ ಕೇಂದ್ರದ ಶ್ರೀ ಬಸವ ಮರಳಸಿದ್ಧ ಸ್ವಾಮೀಜಿಗಳ ದಿವ್ಯಸಾನಿಧ್ಯದಲ್ಲಿ ನಡೆದ ಕಾರ್ಯಕ್ರಮದ ಅಧ್ಯಕ್ಷತೆ ಯನ್ನು ಅಖಿಲ ಭಾರತ ವೀರಶೈವ ಮಹಾಸಭಾ ಜಿಲ್ಲಾ ಘಟಕದ ಅಧ್ಯಕ್ಷ ರುದ್ರಮುನಿ ಸಜ್ಜನ ವಹಿಸಿದ್ದರು.

ಕಾರ್ಯಕ್ರಮದಲ್ಲಿ ಸಂಸದ ಬಿ.ವೈ. ರಾಘವೇಂದ್ರ, ಶಾಸಕರು ಗಳಾದ (3ನೇ ಪುಟಕ್ಕೆ)

# ಉಕ್ರೇನ್-ರಷ್ಯಾ ಯುದ್ಧದಿಂದ ಜಾಗತಿಕ ಹಣಕಾಸು ಬಿಕ್ಕಟ್ಟು?

ಕಾರ್ಡಿಫ್, ಮಾ. 6 – ಉಕ್ರೇನ್‌ನ ಕೀವ್ ಹಾಗೂ ಇತರೆ ನಗರಗಳ ಮೇಲೆ ರಷ್ಯಾ ನಡೆಸಿದ ದಾಳಿಯಿಂದ ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿ ಆರ್ಥಿಕ ಅಸ್ಥಿರತೆ ಹೆಚ್ಚಾಗಿದೆ. ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುತಿನ್ ನಡೆಸಿದ ದಾಳಿಯನ್ನು ಖಂಡಿಸಲು ಪಶ್ಚಿಮದ ನಾಯಕರು ಹಲವಾರು ಆರ್ಥಿಕ ನಿರ್ಬಂಧದ ಕ್ರಮಗಳನ್ನು ತೆಗೆದುಕೊಂಡಿದ್ದಾರೆ.

ರಷ್ಯಾದ ಹಣಕಾಸು ಸಂಸ್ಥೆಗಳು ಹಾಗೂ ವ್ಯಕ್ತಿಗಳ ವಿರುದ್ಧ ಹೇರಲಾದ ಕ್ರಮಗಳಿಂದ ವ್ಯಾಪಕ ಪರಿಣಾಮಗಳಾಗಿವೆ. ಕೆಲ ರಷ್ಯಾ ಬ್ಯಾಂಕುಗಳು ಅಂತರರಾಷ್ಟ್ರೀಯ ಪಾವತಿ ವ್ಯವಸ್ಥೆಯಿಂದ ಹೊರ ಬಿದ್ದಿವೆ. ರಷ್ಯಾದ ಕಂಪನಿಗಳು ಹಾಗೂ ಶ್ರೀಮಂತರ ಆಸ್ತಿಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ. ರಷ್ಯಾದ ಕೇಂದ್ರ ಬ್ಯಾಂಕು ವಿದೇಶಗಳಲ್ಲಿರುವ 630 ಶತಕೋಟಿ ಡಾಲರ್ ಬಳಸದಂತೆ ನಿರ್ಬಂಧ ಹೇರಲಾಗಿದೆ.

ಇದರಿಂದಾಗಿ ಹಲವಾರು ಸಂಸ್ಥೆಗಳು ರಷ್ಯಾದ ಸಾಲದ ಶ್ರೇಯಾಂಕವನ್ನು ಅತ್ಯಂತ ಕೆಳ ಮಟ್ಟಕ್ಕೆ ಇಳಿಸಿವೆ. ಇನ್ನು ಕೆಲ ಸಂಸ್ಥೆಗಳು ಇದೇ ಕ್ರಮದ ಹಾದಿಯಲ್ಲಿವೆ,

ರಷ್ಯಾ ವಿದೇಶಿ ಬ್ಯಾಂಕುಗಳಿಂದ 100 ಶತಕೋಟಿ ಡಾಲರ್ ಸಾಲ ಪಡೆದಿದೆ. ಇದು ರಷ್ಯಾ ಹೊರಗಿನ ಬ್ಯಾಂಕುಗಳಿಗೆ ತೊಡಕು ತಂದಿದೆ. 2008ರ ಮಾದರಿಯಲ್ಲಿ ನಗದು ಹರಿವಿನ ಸಮಸ್ಯೆ ಉಂಟಾಗುವ ಕಳವಳವೂ ಇದೆ.

ರಷ್ಯಾ ಮೇಲೆ ಹೇರಲಾಗಿರುವ ಹೊಸ ನಿರ್ಬಂಧಗಳಿಂದ ಅತಿ ಹೆಚ್ಚು ಪರಿಣಾಮವಾಗುವುದು ಯುರೋಪಿನ ಬ್ಯಾಂಕುಗಳಿಗೆ ಆಸ್ಟ್ರಿಯ, ಫ್ರಾನ್ಸ್ ಹಾಗೂ ಇಟಲಿಗಳಲ್ಲಿ ಗಣನೀಯ ಪರಿಣಾಮವಾಗಲಿದೆ. ಫ್ರಾನ್ಸ್ ಹಾಗೂ ಇಟಲಿ ಬ್ಯಾಂಕುಗಳಿಗೆ ತಲಾ 25 ಶತಕೋಟಿ ಡಾಲರ್ ಸಾಲ ರಷ್ಯಾದಿಂದ ಬರಬೇಕಿದೆ. ಆಸ್ಟ್ರಿಯಾ ಬ್ಯಾಂಕುಗಳು 17.5 ಶತಕೋಟಿ ಡಾಲರ್ ಸಾಲ ನೀಡಿವೆ.



**ರಷ್ಯಾದ ಹಣಕಾಸು ಸಂಸ್ಥೆಗಳು ಹಾಗೂ ವ್ಯಕ್ತಿಗಳ ವಿರುದ್ಧ ಹೇರಲಾದ ಕ್ರಮಗಳಿಂದ ಹೆಚ್ಚು ಪರಿಣಾಮಗಳಾಗಿವೆ.**

2014ರ ನಂತರದಿಂದಲೂ ಅಮೆರಿಕದ ಬ್ಯಾಂಕುಗಳು ರಷ್ಯಾದ ಆರ್ಥಿಕತೆಯಿಂದ ದೂರ ಸರಿಯುತ್ತಿವೆ. ಇಷ್ಟಾದರೂ, ಸಿಟಿ ಗ್ರೂಪ್ ಸಮೂಹ ರಷ್ಯಾದಲ್ಲಿ 10 ಶತಕೋಟಿ ಡಾಲರ್ ಸಾಲ ಹೊಂದಿದೆ. ಬ್ಯಾಂಕ್ ಹೊಂದಿರುವ 2.3 ಟ್ರಿಲಿಯನ್ ಡಾಲರ್ ಆಸ್ತಿಗೆ ಹೋಲಿಕೆ ಮಾಡಿದರೆ ಈ ಸಾಲದ ಪ್ರಮಾಣ ತೀರಾ ಕಡಿಮೆ.

ಉಕ್ರೇನ್ ಸಹ ಸಾಲ ಬಾಕಿಗೆ ಸಿಲುಕುವ ಸಾಧ್ಯತೆ ಇದೆ. ಉಕ್ರೇನ್ 60 ಶತಕೋಟಿ ಡಾಲರ್‌ಗಳ ಸಾಲ ಬಾಂಡ್ ಹೊಂದಿದೆ. ಆ ಬಾಂಡ್‌ಗಳು ಬೆಲೆ ಈಗ ಸಂಪೂರ್ಣ ಬಿದ್ದು ಹೋಗಿವೆ.

ಇದಲ್ಲದೇ ಉಕ್ರೇನ್ ಇಲ್ಲವೇ ರಷ್ಯಾಗೆ ಬ್ಯಾಂಕ್ ಸೇವೆ ಒದಗಿಸುವ ಬ್ಯಾಂಕುಗಳಿಗೂ ಸಂಕಷ್ಟ ಎದುರಾಗಿದೆ. ಫ್ರಾನ್ಸ್‌ನ ಬಿ.ಎನ್.ಪಿ. ಪರಿಬಾಸ್ ಹಾಗೂ ಕ್ರೆಡಿಟ್ ಅಕ್ರಿಕೋಲ್ ಬ್ಯಾಂಕುಗಳು ಉಕ್ರೇನ್‌ನಲ್ಲಿ (2ನೇ ಪುಟಕ್ಕೆ)

## ರಷ್ಯಾದಲ್ಲಿ ಮಾಸ್ಟರ್‌ಕಾರ್ಡ್, ವೀಸಾ ಸೇವೆ ಸ್ಥಗಿತ

ನ್ಯೂಯಾರ್ಕ್, ಮಾ. 6 – ಮಾಸ್ಟರ್‌ಕಾರ್ಡ್ ಹಾಗೂ ವೀಸಾಗಳು ರಷ್ಯಾದಲ್ಲಿ ತಮ್ಮ ಕಾರ್ಯಾಚರಣೆ ನಿಲ್ಲಿಸಿವೆ. ಉಕ್ರೇನ್ ಮೇಲೆ ದಾಳಿ ನಡೆಸಿದ ನಂತರ ಇದು ರಷ್ಯಾಗೆ ಬಿದ್ದಿರುವ ದೊಡ್ಡ ಹೊಡೆತವಾಗಿದೆ.

ರಷ್ಯಾ ಬ್ಯಾಂಕುಗಳ ಮೂಲಕ ನೀಡಲಾಗಿರುವ ತನ್ನ ಕಾರ್ಡುಗಳು ಇನ್ನು ಮುಂದೆ ತನ್ನ ಜಾಲದ ಬೆಂಬಲ ಪಡೆಯುವುದಿಲ್ಲ. ರಷ್ಯಾದ ಹೊರಗೆ ನೀಡಲಾಗಿರುವ ಕಾರ್ಡುಗಳು ರಷ್ಯಾದ ಅಂಗಡಿ, ಇಲ್ಲವೇ ಎ.ಟಿ.ಎಂ.ಗಳಲ್ಲಿ ಕಾರ್ಯ ನಿರ್ವಹಿಸುವುದಿಲ್ಲ ಎಂದು ಮಾಸ್ಟರ್‌ಕಾರ್ಡ್ ಹೇಳಿದೆ.

ಗ್ರಾಹಕರು, ಸಹಭಾಗಿಗಳು ಹಾಗೂ ಸರ್ಕಾರಗಳ ಜೊತೆ ಮಾತುಕತೆ ನಡೆಸಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಮಾಸ್ಟರ್‌ಕಾರ್ಡ್ ಹೇಳಿದೆ.

ಮುಂಬರುವ ದಿನಗಳಲ್ಲಿ ರಷ್ಯಾದಲ್ಲಿ ಎಲ್ಲಾ ವೀಸಾ ವಹಿವಾಟು ನಿಲ್ಲಿಸಲು ಗ್ರಾಹಕರು ಹಾಗೂ ಸಹಭಾಗಿಗಳ ಜೊತೆ ಕಾರ್ಯ ನಿರ್ವಹಿಸುತ್ತಿರುವುದಾಗಿ ವೀಸಾ ಹೇಳಿದೆ.

ಉಕ್ರೇನ್ ಮೇಲೆ ಅಪ್ರಚೋದಿತ ದಾಳಿ ನಡೆಸಿದ ನಂತರ ನಾವು ಈ ಕ್ರಮ ತೆಗೆದುಕೊಳ್ಳುವುದಕ್ಕೆ ಬದ್ಧರಾಗಿದ್ದೇವೆ ಎಂದು ವೀಸಾ ಅಧ್ಯಕ್ಷ ಅಲ್ ಕೆಲ್ಲಿ ಹೇಳಿದ್ದಾರೆ.

ಇದಕ್ಕೂ ಮುಂಚೆ ಅಮೆರಿಕದ ಶಾಸಕರ ಜೊತೆ ಮಾತನಾಡಿದ್ದ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಜೆಲೆನ್‌ಸ್ಕಿ, ರಷ್ಯಾದಲ್ಲಿ ಮಾಸ್ಟರ್‌ಕಾರ್ಡ್ ಹಾಗೂ ವೀಸಾ (2ನೇ ಪುಟಕ್ಕೆ)

# ರಾಷ್ಟ್ರಪತಿ ಆಯ್ಕೆ ಮೇಲೆ ಪಂಚ ರಾಜ್ಯಗಳ ಚುನಾವಣೆ ಪರಿಣಾಮ

ನವದೆಹಲಿ, ಮಾ. 6 – ಐದು ರಾಜ್ಯಗಳ ವಿಧಾನಸಭೆಗಳ ಚುನಾವಣಾ ಫಲಿತಾಂಶ ಈ ವಾರ ಪ್ರಕಟವಾಗಲಿದ್ದು, ಇದು ಮುಂದಿನ ಮುಖ್ಯ ಮಂತ್ರಿಗಳ ಆಯ್ಕೆ ಮಾಡುವುದಷ್ಟೇ ಅಲ್ಲದೇ, ಮುಂದಿನ ರಾಷ್ಟ್ರಪತಿ ಆಯ್ಕೆ ಮೇಲೂ ಪರಿಣಾಮ ಬೀರಲಿದೆ.

**ರಾಷ್ಟ್ರಪತಿ ರಾಮನಾಥ ಕೋವಿಂದ್ ಅವಧಿ ಜುಲೈ 24ರಂದು ಪೂರ್ಣಗೊಳ್ಳಲಿದೆ.**

ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ಅವಧಿ ಜುಲೈ 24ರಂದು ಪೂರ್ಣಗೊಳ್ಳಲಿದೆ. ಉತ್ತರ ಪ್ರದೇಶ, ಪಂಜಾಬ್, ಉತ್ತರಾಖಂಡ, ಮಣಿಪುರ ಹಾಗೂ ಗೋವಾ ವಿಧಾನ ಸಭೆಗಳ ಫಲಿತಾಂಶ ಮಾರ್ಚ್ 10ರಂದು ಹೊರ ಬೀಳಲಿದೆ. ಬಿಜೆಪಿ ಪ್ರಸಕ್ತ ರಾಷ್ಟ್ರಪತಿ ಆಯ್ಕೆಗೆ ಅಗತ್ಯ ಸಂಖ್ಯಾಬಲ ಹೊಂದಿದೆ. (3ನೇ ಪುಟಕ್ಕೆ)

# ಕೊವೊವ್ಯಾಕ್ಸ್ ಬೂಸ್ಟರ್ ಪರೀಕ್ಷೆಗೆ ಅನುಮತಿ : ಕೇಂದ್ರ

ನವದೆಹಲಿ, ಮಾ. 6 – ಕೊವೊವ್ಯಾಕ್ಸ್ ಅನ್ನು ಬೂಸ್ಟರ್ ಡೋಸ್ ಆಗಿ ನೀಡುವ ಮೂರನೇ ಹಂತದ ಪರೀಕ್ಷೆ ನಡೆಸಲು ಕೇಂದ್ರ ಸರ್ಕಾರ ಔಷಧ ನಿಯಂತ್ರಣ ಪ್ರಾಧಿಕಾರಕ್ಕೆ ಅನುಮತಿ ನೀಡಿದೆ. ಕೊವೊವ್ಯಾಕ್ಸ್ ಲಸಿಕೆಯನ್ನು ಸೀಮಿತವಾಗಿ ತುರ್ತು ಸಂದರ್ಭಗಳಲ್ಲಿ ಬಳಸಲು ಔಷಧ ನಿಯಂತ್ರಕವಾದ ಡಿ.ಸಿ.ಜಿ.ಐ. ಈ ಹಿಂದೆ ಡಿಸೆಂಬರ್ 28ರಂದು ಒಪ್ಪಿಗೆ ನೀಡಿತ್ತು. ಇದನ್ನು ಲಸಿಕಾ ಅಭಿಯಾನದಲ್ಲಿ ಇನ್ನೂ ಬಳಸಲಾಗುತ್ತಿಲ್ಲ.

# ಸಂಘಟನೆಯಿಂದ ಸಮಾಜಕ್ಕೆ ಉತ್ಸಾಹ, ಶಕ್ತಿ

## ಆರ್.ಎಸ್.ಎಸ್. ರೀತಿಯಲ್ಲಿ ಶಿಸ್ತಿನ ಸಂಘಟನೆಗೆ ವಚನಾನಂದ ಶ್ರೀಗಳ ಕರೆ



ಹರಿಹರ, ಮಾ.6- ಪಂಚಮಸಾಲಿ ಸಮಾಜವು ಗ್ರಾಮ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಉತ್ತಮ ಸಂಘಟನೆಯಾದರೆ, ಸಮಾಜಕ್ಕೆ ಉತ್ಸಾಹ ಮತ್ತು ಶಕ್ತಿ ಹೆಚ್ಚಾಗುತ್ತದೆ ಎಂದು ಪಂಚಮಸಾಲಿ ಸಮಾಜದ ಗುರು ಪೀಠಾಧ್ಯಕ್ಷರಾದ ಶ್ರೀ ವಚನಾನಂದ ಸ್ವಾಮಿಗಳು ಹೇಳಿದರು.

ನಗರದ ಪಂಚಮಸಾಲಿ ಗುರು ಪೀಠದ ಆವರಣದಲ್ಲಿ ನಡೆದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭದ ಸಾನ್ನಿಧ್ಯ ವಹಿಸಿ ಅವರು ಮಾತನಾಡುತ್ತಿದ್ದರು.

ರಾಷ್ಟ್ರೀಯ ಸ್ವಯಂ ಸಂಘಟನೆ ತರಹದಲ್ಲಿ ನಮ್ಮ ಸಮಾಜ ಶಿಸ್ತಿನಿಂದ ಸಂಘಟನೆ ಮಾಡುವುದಕ್ಕೆ ಮುಂದಾಗಬೇಕು. ಮಠಕ್ಕೆ ಬರುವ ಭಕ್ತರು ಮುಂದಿನ ದಿನಗಳಲ್ಲಿ ನಮಗೆ ಉದ್ಯೋಗದ ಜೊತೆಗೆ ಯಾವುದೇ ಕೆಲಸವನ್ನು ತೆಗೆದುಕೊಂಡು ಬರುವುದಕ್ಕಿಂತ ಮುಂಚೆಯೇ ರಾಜ್ಯ ಅಧ್ಯಕ್ಷರ ಬಳಿ ಮನವಿ ಪತ್ರವನ್ನು ಕೊಟ್ಟು ನಮ್ಮಲ್ಲಿ ಬರಬೇಕು. ಬರುವ ಸಮಯದಲ್ಲಿ ನಮಗೆ ಮುಂಚಿತವಾಗಿ ತಿಳಿಸಿ ಭೇಟಿ ಮಾಡುವುದನ್ನು ರೂಢಿಸಿಕೊಳ್ಳಬೇಕು. ನಾವು ಇನ್ನು ಮುಂದೆ ಯಾವುದೇ ರೀತಿಯ ಕೆಲಸಗಳಿಗೆ ಲೆಟರ್ ಕೊಡುವುದಿಲ್ಲ. ಇದನ್ನು ಸಮಾಜದ ರಾಜ್ಯಾಧ್ಯಕ್ಷ ಜಿ.ಪಿ. ಪಾಟೀಲ್ ಮಾಡುತ್ತಾರೆ ಎಂದು ಹೇಳಿದರು.

ಬರುವ ಏಪ್ರಿಲ್ 23-24 ರಂದು ಹರಜಾತ್ರೆ ಹಮ್ಮಿಕೊಳ್ಳಲಾಗಿದೆ. ಈ ಬಾರಿ ಹರ ಜಾತ್ರೆಯ ಸಮಯದಲ್ಲಿ ದೇಶದ 100 ಕಾರ್ಖಾನೆಗಳು ಮುಂದೆ ಬಂದಿದ್ದು, ಅದರಲ್ಲಿ ಸಮಾಜದ 5000 ಯುವಕರಿಗೆ ಉದ್ಯೋಗ ಕೊಡಿಸಲಾಗುತ್ತದೆ ಎಂದರು. ಪಂಚಮಸಾಲಿ ಸಮಾಜದ ಮಾಜಿ ಅಧ್ಯಕ್ಷ ಬಸವರಾಜ್ (3ನೇ ಪುಟಕ್ಕೆ)

# ವರದಿಗಾರರ ಕೂಟದ ಅಧ್ಯಕ್ಷರಾಗಿ ಕೆ. ಏಕಾಂತಪ್ಪ ಆಯ್ಕೆ

## ಕಾರ್ಯದರ್ಶಿ ಸಿ. ವರದರಾಜ್, ಖಜಾಂಚಿಯಾಗಿ ಮಧು ನಾಗರಾಜ್





ದಾವಣಗೆರೆ, ಮಾ.6- ದಾವಣಗೆರೆ ವರದಿಗಾರರ ಕೂಟದ ನೂತನ ಅಧ್ಯಕ್ಷರಾಗಿ ಕೆ. ಏಕಾಂತಪ್ಪ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಭಾನುವಾರ ವರದಿಗಾರರ ಕೂಟ ದಲ್ಲಿ ನಿಕಟಪೂರ್ವ ಅಧ್ಯಕ್ಷ ಜಿ.ಎಂ. ಆರ್. ಆರಾಧ್ಯ ಅವರ ಅಧ್ಯಕ್ಷತೆಯಲ್ಲಿ ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷರಾಗಿ ಕೆ. ಏಕಾಂತಪ್ಪ, ಪ್ರಧಾನ ಕಾರ್ಯದರ್ಶಿ (2ನೇ ಪುಟಕ್ಕೆ)

# ಉಕ್ರೇನ್‌ನಿಂದ ಮರಳಿದವರಿಗೆ ವೈದ್ಯಕೀಯ ಪದವಿ : ಸುಪ್ರೀಂನಲ್ಲಿ ಅರ್ಜಿ

ನವದೆಹಲಿ, ಮಾ. 6 – ಉಕ್ರೇನ್‌ನಿಂದ ಮರಳಿರುವ ಭಾರತದ ವೈದ್ಯಕೀಯ ವಿದ್ಯಾರ್ಥಿಗಳಿಗೆ ನೆರವಾಗಲು ಭಾರತ ಇಲ್ಲವೇ ವಿದೇಶದ ಪದವಿ ನೀಡುವಂತೆ ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿದೆ.

ಕೇಂದ್ರ, ರಾಜ್ಯ ಸರ್ಕಾರಗಳ ವೈದ್ಯಕೀಯ ಕಾಲೇಜುಗಳು ಮತ್ತು ಖಾಸಗಿ ವೈದ್ಯಕೀಯ ಕಾಲೇಜುಗಳು ಜೊತೆಯಾಗಿ ವಿದ್ಯಾರ್ಥಿಗಳ ಶಿಕ್ಷಣ ಮುಂದುವರೆಸಲು ಕ್ರಮ ತೆಗೆದುಕೊಳ್ಳಬೇಕು. ಈ (3ನೇ ಪುಟಕ್ಕೆ)

# ಹಿರಿಯರನ್ನು ಗೌರವಿಸಿ, ಕಿರಿಯರನ್ನು ಪ್ರೋತ್ಸಾಹಿಸಿ

ದಾವಣಗೆರೆ, ಮಾ.6- ಹಿರಿಯರನ್ನು ಗೌರವಿಸಿ, ಕಿರಿಯರನ್ನು ಪ್ರೋತ್ಸಾಹಿಸಿ ಎಂದು ಜೀ ಕನ್ನಡದ ಹಿಟ್ಲರ್ ಕಲ್ಯಾಣ ಧಾರಾವಾಹಿಯ ಹಿರಿಯ ಕಲಾವಿದರಾದ ವಿದ್ಯಾಮೂರ್ತಿ ಕಿವಿ ಮಾತು ಹೇಳಿದರು.

ವನಿತಾ ಸಮಾಜ, ವನಿತಾ ಸಹಾಯ ಸಮಿತಿ ವತಿಯಿಂದ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಮಹಿಳಾ ಸಾಂಸ್ಕೃತಿಕ ಸಮಾರಂಭ ಹಾಗೂ ಸೇವಾ ಕಾರ್ಯಕ್ರಮಗಳ ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಅವರು ಮಾತನಾಡಿದರು.



**ಮಹಿಳಾ ಸಾಂಸ್ಕೃತಿಕ ಸಮಾರಂಭ ಹಾಗೂ ಸೇವಾ ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭದಲ್ಲಿ ಹಿರಿಯ ಕಲಾವಿದೆ ವಿದ್ಯಾಮೂರ್ತಿ**

ಚೈತ್ರ ಮಾಸದಲ್ಲಿ ಎಲೆಗಳು ಚಿಗುರುತ್ತವೆ. ಸೂರ್ಯನ ಶಾಖವನ್ನು ಹೀರಿ ಬೇರಿಗೆ ರವಾನಿಸುತ್ತವೆ. ಅದರಿಂದ ಬೇರು ಗಟ್ಟಿಯಾಗಿ, ಮರ ಭದ್ರವಾಗಿ ನಿಲ್ಲಲು ಸಹಕಾರಿಯಾಗುತ್ತದೆ. ಎಲೆ ಇಲ್ಲದೆ ಬೇರಿಗೆ ಶಕ್ತಿ ಇಲ್ಲ. ಬೇರಿಲ್ಲದೆ ಮರವಿಲ್ಲ. ಹಳೆಯ ಬೇರು ಹಾಗೂ ಹೊಸ ಚಿಗುರಿನ ಸಂಬಂಧದಂತೆ ಕಿರಿಯರು ಹಾಗೂ ಹಿರಿಯರು ಪರಸ್ಪರ ಸಹಕಾರದಿಂದಿರಬೇಕು ಎಂದು ಹೇಳಿದರು.

ಇತ್ತೀಚಿನ ದಿನಗಳಲ್ಲಿ ಅತ್ತೆ-ಸೊಸೆ ಯಂದಿರ ನಡುವೆ ವೈಮನಸ್ಸುಗಳು ಹೆಚ್ಚುತ್ತಿವೆ. ಹಿರಿಯರು ಮನೆಯಲ್ಲಿ ಹೊಸ ಚಿಗುರಿಗೆ ಅವಕಾಶ ಮಾಡಿಕೊಡ ಬೇಕು. ಸೊಸೆ ಬಂದಾಗ ಅತ್ತೆಗೆ ತಳಮಳ ಶುರುವಾಗುವುದು ಸಹಜ. ಅದನ್ನು ಬದಿಗಿಟ್ಟು ಸೊಸೆಯನ್ನು ಪ್ರೋತ್ಸಾಹಿಸ ಬೇಕು. ಅದರಲ್ಲೂ ಕಚೇರಿಗಳಲ್ಲಿ ಕಾರ್ಯ ನಿರ್ವಹಿಸುವಂತಹ ಸೊಸೆ ಯಂದಿರಿಗೂ ಪೂರಕ ವಾತಾವರಣ ಕಲ್ಪಿಸಿಕೊಡಬೇಕು ಎಂದು ಸಲಹೆ ನೀಡಿದರು.

ಜೀ ಕನ್ನಡದ ಹಿಟ್ಲರ್ ಕಲ್ಯಾಣ ಧಾರಾವಾಹಿ ಖ್ಯಾತಿಯ ಕಲಾವಿದೆ ಕುಮಾರಿ ಮಲೈಕ ಟಿ.ವಿ. ಮಾತನಾ ಡುತ್ತಾ, ಮನೆಗಳಲ್ಲಿ, ಕಚೇರಿಗಳಲ್ಲಿ, ಓದಿನ ವಿಷಯ (2ನೇ ಪುಟಕ್ಕೆ)

# ಮೂಢ ನಂಬಿಕೆಗೆ ಬಲಿಯಾಗದಿರಿ: ಡಿಸಿ

## ನಗರ ದೇವತೆ ದುಗ್ಗಮ್ಮ, ಚೌಡೇಶ್ವರಿ ಜಾತ್ರೆಗಳ ನಾಗರಿಕ ಸೌಹಾರ್ದ ಸಭೆ

ದಾವಣಗೆರೆ, ಮಾ,6- ನಗರ ದೇವತೆ ದುಗ್ಗಮ್ಮ ಜಾತ್ರೆ, ವಿನೋಬ ನಗರದ ಚೌಡೇಶ್ವರಿ ಜಾತ್ರೆ ಹಾಗೂ ಹೋಳಿ ಹಬ್ಬಗಳನ್ನು ಶಾಂತಿ, ಸೌಹಾರ್ದತೆಯಿಂದ ಆಚರಿಸುವ ಮೂಲಕ ಹಬ್ಬಗಳ ಹೆಸರಿನಲ್ಲಿ ನಡೆಯುವ ಕೆಲ ಮೂಢನಂಬಿಕೆಗಳನ್ನು ಧಿಕ್ಕರಿಸುವ ಮೂಲಕ ಹೊಸತನಕ್ಕೆ ಹೊಂದಿಕೊಳ್ಳೋಣ ಎಂದು ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ ಹೇಳಿದರು.



ಭಾನುವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಕಛೇರಿ ಸಭಾಂಗಣದಲ್ಲಿ ನಡೆದ ಸೌಹಾರ್ದ ಸಭೆಯಲ್ಲಿ ಮಾತನಾಡಿದ ಅವರು, ಪ್ರಾಣಿಬಲಿ ನಿಷೇಧ ಕಾಯಿದೆಯು ಅತ್ಯಂತ ಕಠಿಣವಾಗಿದ್ದು, ಯಾರಾದರು ಕಾನೂನು ಮೀರಿ ವರ್ತಿಸಿದರೆ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ, ಕೆಲ ಸಂದರ್ಭಗಳಲ್ಲಿ ಕಠಿಣ ಕ್ರಮ ಕೈಗೊಳ್ಳಬೇಕಾಗುತ್ತದೆ, ಅಂತಹದಕ್ಕೆ ಯಾರೂ ಅವಕಾಶ ಮಾಡಿಕೊಡಬಾರದು. ಇದರಿಂದ ದೇವಸ್ಥಾನದ ಆಡಳಿತ ಮಂಡಳಿಗೂ ತೊಂದರೆಯಾಗುತ್ತದೆ. ಜಿಲ್ಲಾಡಳಿತ ಹಾಗೂ ವಿವಿಧ ಇಲಾಖೆಗಳು ಜಾತ್ರಾ ಯಶಸ್ಸಿಗೆ ಎಲ್ಲಾ ರೀತಿಯ ಸಹಕಾರ ನೀಡಲಾಗುವುದೆಂದರು.

ಪಾಲಿಕೆ ಮೇಯರ್ ಜಯಮ್ಮ ಗೋಪಿನಾಯ್ಕ ಮಾತನಾಡಿ, ಜಾತ್ರೆಗಳು ಸುಗಮವಾಗಿ ನಡೆಯಲು ಪಾಲಿಕೆ ವತಿಯಿಂದ ಎಲ್ಲಾ ನೆರವು ನೀಡಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಮಾತನಾಡಿ, ಟ್ರಾಫಿಕ್ ಸಮಸ್ಯೆಯಾಗದಂತೆ ಹಾಗೂ ಪಾರ್ಕಿಂಗ್ ಸಂಬಂಧಿಸಿದಂತೆ ಎಲ್ಲಾ ತಯಾರಿ ಮಾಡಿಕೊಳ್ಳಲಾಗುವುದು. 280 ಸಿಸಿಟಿವಿ ಕ್ಯಾಮರಾಗಳನ್ನು ಹಾಕಲಾಗುವುದು ಮತ್ತು ಡ್ರೋಣ್ ಕ್ಯಾಮರಾಗಳು ಕಣ್ಗಾವಲು ಇರಲಿವೆ. ದೇವಸ್ಥಾನದ ವತಿಯಿಂದ ಹೆಚ್ಚು ಸ್ವಯಂ ಸೇವಕರನ್ನು (2ನೇ ಪುಟಕ್ಕೆ)

# ಹರಿಹರದಲ್ಲಿ ಇಂದು ಸರ್ಕಾರಿ ನೌಕರರ ನೂತನ ವಸತಿ ಗೃಹಗಳ ಉದ್ಘಾಟನೆ



ಹರಿಹರ,ಮಾ.6- ಸರ್ಕಾರಿ ನೌಕರರ ನೂತನ ವಸತಿ ಗೃಹಗಳ ಉದ್ಘಾಟನೆ ಕಾರ್ಯಕ್ರಮವು ನಾಳೆ ದಿನಾಂಕ 7 ರ ಸೋಮವಾರ ಬೆಳಿಗ್ಗೆ 11 ಗಂಟೆಗೆ ಗುರು ಭವನದಲ್ಲಿ ನಡೆಯಲಿದೆ ಎಂದು ತಾಲ್ಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ ತಿಳಿಸಿದರು.

ಇದೇ ಸಂದರ್ಭದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ಶೈಕ್ಷಣಿಕ ಕಾರ್ಯಗಾರ ಮತ್ತು ಸಂಘದ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸಹ ಜರುಗಲಿದೆ ಎಂದು ನಗರದ ರಚನಾ ಕ್ರೀಡಾ ಟ್ರಸ್ಟ್ ಸಭಾಂಗಣದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ವಸತಿ ಗೃಹಗಳ ಉದ್ಘಾಟನೆಯನ್ನು ಶಾಸಕ ಎಸ್. ರಾಮಪ್ಪ ಮತ್ತು ಕಾರ್ಯಕ್ರಮದ ಉದ್ಘಾಟನೆಯನ್ನು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಮಾಡಲಿದ್ದಾರೆ.

ಅಧ್ಯಕ್ಷತೆಯನ್ನು ತಾಲ್ಲೂಕು ಸಂಘದ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ ವಹಿಸಲಿದ್ದು, ಮುಖ್ಯ ಅತಿಥಿಗಳಾಗಿ ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಭೈರತಿ, ಸಂಸದ ಜಿ.ಎಂ. ಸಿದ್ದೇಶ್ವರ, ನಗರಸಭೆ ಅಧ್ಯಕ್ಷರಾದ ರತ್ನ ಡಿ. ಉಜ್ಜೇಶ್, ಎಪಿಎಂಸಿ ಅಧ್ಯಕ್ಷ ಜಿ. ಮಂಜುನಾಥ್ ಪಾಟೀಲ್, ಜಿಲ್ಲಾ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಬಿ. ಪಾಲಾಕ್ಷ, ಮಾಜಿ ಶಾಸಕರಾದ ಹೆಚ್.ಎಸ್. ಶಿವಶಂಕರ್, ಬಿ.ಪಿ ಹರೀಶ್ ಮತ್ತು ಇತರರು ಭಾಗವಹಿಸುವರು.

ರಾಷ್ಟ್ರೀಯ ಹೊಸ ಶಿಕ್ಷಣ ನೀತಿ ಬಗ್ಗೆ ಶಿವಮೊಗ್ಗದ ಉಪನ್ಯಾಸಕ ಡಾ. ಜಿ.ವಿ. ಹರಿಪ್ರಸಾದ್ ಉಪನ್ಯಾಸ ನೀಡಲಿದ್ದಾರೆ. ಈ ಸಂದರ್ಭದಲ್ಲಿ ರಾಜ್ಯ ಸಮಿತಿ ಸದಸ್ಯ ವಿಜಯ ಮಹಾಂತೇಶ್, ಗೌರವಾಧ್ಯಕ್ಷ ಎಂ. ಉಮಣ್ಣ, ಎ.ಕೆ. ಭೂಮೇಶ್, ಪ್ರಧಾನ ಕಾರ್ಯದರ್ಶಿ ಡಿ.ಟಿ. ಮಂಜುನಾಥ್, ಖಜಾಂಚಿ ಪಿ. ಶಿವಮೂರ್ತಿ, ನಿರ್ದೇಶಕಿ ಯಶೋದಮ್ಮ ಹಾಗು ಇತರರು ಹಾಜರಿದ್ದರು.

## ವೈದ್ಯಕೀಯ ಪದವಿ : ಅರ್ಜಿ

**(1ನೇ ಪುಟದಿಂದ)** ಕಾಲೇಜುಗಳು ಉಕ್ರೇನ್‌ನ ಅನಿವಾಸಿ ಸಂಸ್ಥೆಯಾಗಿ ಕಾರ್ಯ ನಿರ್ವಹಿಸಬೇಕು ಎಂದು ಕೋರಲಾಗಿದೆ.

ಉಕ್ರೇನ್‌ನಲ್ಲಿ ಯಾವಾಗ ಸಾಮಾನ್ಯ ಪರಿಸ್ಥಿತಿ ನೆಲೆಗೊಳ್ಳಲಿದೆ ಎಂಬುದು ಸ್ಪಷ್ಟವಾಗಿಲ್ಲ. ವಿದ್ಯಾರ್ಥಿಗಳು ತಮ್ಮ ಕೋರ್ಸ್ ಪೂರ್ಣಗೊಳಿಸಲು ಸಾಧ್ಯವಾಗುವ ಬಗ್ಗೆಯೂ ಸ್ಪಷ್ಟತೆ ಇಲ್ಲ ಎಂದು ಅರ್ಜಿಯಲ್ಲಿ ಹೇಳಲಾಗಿದೆ.

## ನಗರದಲ್ಲಿಂದು ಗ್ಲಾಕೋಮಾ ಚಿಕಿತ್ಸೆ

ವಿಶ್ವ ಗ್ಲಾಕೋಮಾ ದಿನದ ಅಂಗವಾಗಿ ಎಸ್.ಎಸ್. ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಗ್ಲಾಕೋಮಾ ಜಾಗೃತಿ ಸಪ್ತಾಹ ಹಾಗೂ ಉಚಿತ ಪರೀಕ್ಷೆ ಮತ್ತು ಚಿಕಿತ್ಸೆಯನ್ನು ಇಂದಿನಿಂದ ಇದೇ ದಿನಾಂಕ 12 ರವರೆಗೆ ಹಮ್ಮಿಕೊಳ್ಳಲಾಗಿದೆ.

# ಹತಾಶೆಯಿಂದ ಸತ್ಯಕ್ಕೆ ದೂರವಾದ ಆರೋಪ





24ನೇ ವಾರ್ಡ್ ಕಾಮಗಾರಿಗಳ ಬಗ್ಗೆ ಕಾಂಗ್ರೆಸ್ ಮುಖಂಡರ ಆರೋಪಗಳಿಗೆ ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್ ತಿರುಗೇಟು

ದಾವಣಗೆರೆ, ಮಾ. 6 – ತಾವೇ ಗುತ್ತಿಗೆದಾರರಾಗಿರುವುದರಿಂದ ಕಾಮಗಾರಿ ವಿಳಂಬವಾಗುವ ಜೊತೆಗೆ ಗುಣಮಟ್ಟದಲ್ಲಿ ಲೋಪವಾಗುತ್ತಿದೆ ಎಂದು ಕಾಂಗ್ರೆಸ್ ಮುಖಂಡರು ಮಾಡಿರುವ ಆರೋಪ ತಳ್ಳಿ ಹಾಕಿರುವ 24ನೇ ವಾರ್ಡ್ ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್, ಕಾಂಗ್ರೆಸ್ ಮುಖಂಡರು ಹತಾಶೆಯಿಂದ ತೇಜೋವಧೆ ಉದ್ದೇಶದಿಂದ ಸತ್ಯಕ್ಕೆ ದೂರವಾದ ಆರೋಪ ಮಾಡುತ್ತಿದ್ದಾರೆ ಎಂದಿದ್ದಾರೆ.

24ನೇ ವಾರ್ಡ್‌ನ ಮೋತಿ ವೀರಪ್ಪ ಶಾಲೆ ಹಿಂಭಾಗದಲ್ಲಿ ಜಲಸಿರಿ ಮತ್ತಿತರೆ ಕಾಮಗಾರಿಗಳು 3-4 ತಿಂಗಳಿನಿಂದ ಆರಂಭವಾಗಿದ್ದರೂ ಶೇ.25ರಷ್ಟು ಪೂರ್ಣಗೊಂಡಿಲ್ಲ ಎಂದು ಕಾಂಗ್ರೆಸ್ ಮುಖಂಡರು ಆರೋಪಿಸಿದ್ದರು.

ಗುಂಡಿ ಸರ್ಕಲ್‌ನಿಂದ ಲೂರ್ಡ್ಸ್ ಬಾಯ್ಸ್ ಶಾಲೆಯ ರಸ್ತೆಯವರೆಗಿನ (ಡಾ. ಎಂ.ಸಿ. ಮೋದಿ ರಸ್ತೆ) ಮತ್ತು ಮೋತಿ ವೀರಪ್ಪ ಕಾಲೇಜಿನಿಂದ ಎ.ವಿ. ಕೆ. ಕಾಲೇಜು ರಸ್ತೆಯವರೆಗಿನ ಅಭಿವೃದ್ಧಿ ಕಾಮಗಾರಿಯನ್ನು ಗುತ್ತಿಗೆದಾರರಾದ ಉದಯ ಶಿವಕುಮಾರ್ ಅವರಿಗೆ ಜನವರಿ 21, 2022ರಂದು ಪಾಲಿಕೆ ಆಯುಕ್ತರು ನೀಡಿದ್ದಾರೆ. ಈ ಕಾಮಗಾರಿಯೂ ಪ್ಯಾಕೇಜ್ ಟೆಂಡರ್ ಆಗಿದ್ದು, ವಾರ್ಡ್ ಸಂಖ್ಯೆ 17, 24, 23 ಮತ್ತು 22ರ ಕಾಮಗಾರಿಗಳು ಸೇರಿವೆ ಎಂದು ಪ್ರಸನ್ನ ಕುಮಾರ್ ಹೇಳಿದ್ದಾರೆ.

ನಂತರದ 40 ದಿನಗಳಲ್ಲಿ ಗುತ್ತಿಗೆದಾರರು ಡಾ. ಎಂ.ಸಿ. ಮೋದಿ ರಸ್ತೆಯ 400 ಮೀಟರ್‌ಗೂ ಹೆಚ್ಚು ಉದ್ದದ ಕಾಂಕ್ರೀಟ್ ರಸ್ತೆ ಕಾಮಗಾರಿ ಪೂರ್ಣಗೊಳಿಸಿದ್ದಾರೆ. ರಾತ್ರಿ ವೇಳೆಯೂ ಕಾರ್ಯ ನಿರ್ವಹಿಸಿ ತ್ವರಿತವಾಗಿ ರಸ್ತೆ ನಿರ್ಮಾಣ ಕಾರ್ಯ ನಡೆಯುತ್ತಿದೆ ಎಂದವರು ಹೇಳಿದ್ದಾರೆ.

ಮೋತಿ ವೀರಪ್ಪ ಕಾಲೇಜು ಪಕ್ಕದಲ್ಲಿ ಉಳಿದ 200 ಮೀಟರ್ ರಸ್ತೆಯನ್ನೂ ಸಹ ಜಲಸಿರಿಯ ಮನೆ ನಲ್ಲಿಗಳ ಸಂಪರ್ಕ ಎರಡು ದಿನಗಳಲ್ಲಿ ಮುಕ್ತಾಯಗೊಂಡ ನಂತರ ಕಾಮಗಾರಿಯನ್ನು 8-10 ದಿನಗಳಲ್ಲಿ ಪೂರ್ಣಗೊಳಿಸುವ ಸಿದ್ಧತೆ ಈಗಾಗಲೇ ಮಾಡಿಕೊಂಡಿದ್ದಾರೆ. ಇದು ಕಾಂಕ್ರೀಟ್ ಕಾಮಗಾರಿಯಾದ ಕಾರಣ ಎಲ್ಲ ಯುಟಿಲಿಟಿ ಮಾಡಿಕೊಂಡು ಕೆಲಸ ಮಾಡಬೇಕಿದೆ. ಕಾಮಗಾರಿಯನ್ನು ವ್ಯವಸ್ಥಿತವಾಗಿ ಮಾಡಲಾಗುತ್ತಿದೆ ಎಂದವರು ಹೇಳಿದ್ದಾರೆ.

ತಮ್ಮ ತೇಜೋವಧೆ ಮಾಡಲು ಸುಳ್ಳು ಆರೋಪ ಮಾಡಿದವರ ವಿರುದ್ಧ ಮಾನನಷ್ಟ ಮೊಕದ್ದಮೆ ಹೂಡುವ ಆಲೋಚನೆ ಮಾಡಿರುವುದಾಗಿಯೂ ಅವರು ತಿಳಿಸಿದ್ದಾರೆ.

## ಪಂಚ ರಾಜ್ಯಗಳ ಚುನಾವಣೆ ಪರಿಣಾಮ

**(1ನೇ ಪುಟದಿಂದ)** ಆದರೆ, ಉತ್ತರ ಪ್ರದೇಶದಲ್ಲಿ ವ್ಯತಿರಿಕ್ತ ಫಲಿತಾಂಶ ಬಂದಲ್ಲಿ ಪರಿಸ್ಥಿತಿ ಬದಲಾಗಲಿದೆ. ಬಿಜು ಜನತಾದಳ, ತೆಲಂಗಾಣ ರಾಷ್ಟ್ರ ಸಮಿತಿ, ವೈ.ಎಸ್.ಆರ್. ಕಾಂಗ್ರೆಸ್ ಪಕ್ಷಗಳು ಗಣನೀಯ ಸಂಖ್ಯಾಬಲ ಹೊಂದಿದ್ದು, ಫಲಿತಾಂಶದ ಮೇಲೆ ಪರಿಣಾಮ ಬೀರಬಹುದು.

ಚುನಾವಣೆ ನಡೆಯಲಿರುವ ರಾಜ್ಯಗಳಲ್ಲಿ ಉತ್ತರ ಪ್ರದೇಶ ಅತಿ ಹೆಚ್ಚಿನ ಮಹತ್ವ ಪಡೆದಿದೆ. ಇಲ್ಲಿನ ಪ್ರತಿ ಶಾಸಕ ರಾಷ್ಟ್ರಪತಿ ಚುನಾವಣೆಯಲ್ಲಿ 208 ಮತಗಳ ಮೌಲ್ಯ ಹೊಂದಿದ್ದಾನೆ. ಸಿಕ್ಕಿಂ ಶಾಸಕರು ಅತಿ ಕಡಿಮೆ 7 ಮತಗಳ ಮೌಲ್ಯ ಹೊಂದಿದ್ದಾರೆ. ಪಂಜಾಬ್ ಶಾಸಕರು 116, ಉತ್ತರಾಖಂಡ 64, ಗೋವಾ 20 ಹಾಗೂ ಮಣಿಪುರ 18 ಶಾಸಕರ ಮೌಲ್ಯ ಹೊಂದಿದ್ದಾರೆ.

ಉತ್ತರ ಪ್ರದೇಶ 403 ಶಾಸಕರನ್ನು ಹೊಂದಿದೆ. ಶಾಸಕರ ಮತ ಮೌಲ್ಯವೂ ಅತಿ ಹೆಚ್ಚಿನ 208 ಆಗಿದೆ. ಹೀಗಾಗಿ ಉತ್ತರ ಪ್ರದೇಶ ವಿಧಾನಸಭೆಯ ಮತಗಳ ಮೌಲ್ಯ 83,824 ಆಗಿದೆ. ಪಂಜಾಬ್ 13,572, ಉತ್ತರಾಖಂಡ 4,480, ಗೋವಾ 800 ಹಾಗೂ ಮಣಿಪುರ 1,080 ಮತಗಳ ಮೌಲ್ಯ ಹೊಂದಿದೆ.

ರಾಷ್ಟ್ರಪತಿ ಚುನಾವಣೆಯಲ್ಲಿ ಎನ್.ಡಿ.ಎ. ಹೊಂದಿರುವ ಮತಗಳ ಮೌಲ್ಯ ಶೇ.50ಕ್ಕಿಂತ ಸ್ವಲ್ಪ ಕಡಿಮೆ ಇದೆ. ಹೀಗಾಗಿ ರಾಷ್ಟ್ರಪತಿ ಚುನಾವಣೆಯಲ್ಲಿ ಬಿಜೆಪಿ ಮಿತ್ರ ಪಕ್ಷಗಳಲ್ಲದವರನ್ನು ಅವಲಂಬನೆ ಮಾಡಬೇಕಿದೆ.

ಟಿ.ಆರ್.ಎಸ್. ಅಧ್ಯಕ್ಷ ಹಾಗೂ ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರು ಪ್ರತಿಪಕ್ಷದ ನಾಯಕರನ್ನು ಭೇಟಿ ಮಾಡುತ್ತಿದ್ದು, ರಾಷ್ಟ್ರಪತಿ ಚುನಾವಣೆ ಮೇಲೆ ಪ್ರಭಾವ ಬೀರುವ ಪ್ರಯತ್ನ ನಡೆಸಿದ್ದಾರೆ.

ಬಿಜೆಪಿ ನೇತೃತ್ವದ ಎನ್.ಡಿ.ಎ.ದಲ್ಲಿ ಒಡಕು ತರುವ ಪ್ರಯತ್ನವನ್ನೂ ಪ್ರತಿಪಕ್ಷಗಳು ಮಾಡಬಹುದಾಗಿದೆ. ಪ್ರತಿಪಕ್ಷಗಳಿಂದ ರಾಷ್ಟ್ರಪತಿ ಸ್ಥಾನಕ್ಕೆ ಜಂಟಿ ಅಭ್ಯರ್ಥಿಯಾಗಿ ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರನ್ನು ಆಯ್ಕೆ ಮಾಡಲು ಈ ಹಿಂದೆ ಪ್ರಸ್ತಾಪಿಸಲಾಗಿತ್ತು.

ರಾಜ್ಯಸಭೆಯ 233 ಸದಸ್ಯರು, ಲೋಕಸಭೆಯ 543 ಹಾಗೂ ವಿಧಾನ ಸಭೆಗಳ 4,120 ಶಾಸಕರು ಸೇರಿ ರಾಷ್ಟ್ರಪತಿ ಆಯ್ಕೆ ಮಾಡುತ್ತಾರೆ.

ಒಟ್ಟಾರೆ 4,896 ಮತದಾರರ ಮತಗಳ ಮೌಲ್ಯ 10,98,903 ಆಗಿದೆ. ರಾಷ್ಟ್ರಪತಿ ಆಯ್ಕೆಗೆ ಈ ಪೈಕಿ ಕನಿಷ್ಠ ಶೇ.50ರಷ್ಟು ಮತಗಳು ಬೇಕಿವೆ.

ಬಿಜೆಪಿ 1,431 ಶಾಸಕರನ್ನು ಹೊಂದಿದೆ. ಕಾಂಗ್ರೆಸ್ 766 ಶಾಸಕರನ್ನು ಹೊಂದಿದೆ. ಬಿಜೆಪಿಯೇತರ ಪಕ್ಷಗಳು 1,923 ಶಾಸಕರನ್ನು ಹೊಂದಿವೆ.

ಲೋಕಸಭೆಯಲ್ಲಿ ಬಿಜೆಪಿ 334 ಸದಸ್ಯರು ಹಾಗೂ ರಾಜ್ಯಸಭೆಯಲ್ಲಿ 115 ಸದಸ್ಯರನ್ನು ಹೊಂದಿದೆ. ಆದರೆ, ಇವರಲ್ಲಿ ಒಂಭತ್ತು ಜನ ನಾಮಕರಣಗೊಂಡವರಾಗಿದ್ದು ಮತದಾನ ಮಾಡುವಂತಿಲ್ಲ. ಪ್ರತಿಯೊಬ್ಬ ಸಂಸದನ ಮತ ಮೌಲ್ಯ 708 ಆಗಿದೆ.

# ನಗರದಲ್ಲಿ ಇಂದು ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ರಜತ ಮಹೋತ್ಸವ ಕಟ್ಟಡಕ್ಕೆ ಶಂಕುಸ್ಥಾಪನೆ

ದಾವಣಗೆರೆ, ಮಾ.6- ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಜಿಲ್ಲಾ ಶಾಖೆಯ ರಜತ ಮಹೋತ್ಸವ ಕಟ್ಟಡದ ಶಂಕುಸ್ಥಾಪನೆ ಹಾಗೂ ಭೋಜನಾಲಯ ಮತ್ತು ಮನರಂಜನಾ ಕೇಂದ್ರದ ಉದ್ಘಾಟನೆ ಕಾರ್ಯಕ್ರಮವು ನಾಳೆ ದಿನಾಂಕ 7ರ ಸೋಮವಾರ ಸಂಜೆ 5 ಗಂಟೆಗೆ ನಗರದ ಸರ್ಕಾರಿ ನೌಕರರ ಸಮುದಾಯ ಭವನದಲ್ಲಿ ನಡೆಯಲಿದೆ.

ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ಭೋಜನಾಲಯ ಹಾಗೂ ಮನರಂಜನಾ ಕೇಂದ್ರ ಉದ್ಘಾಟಿಸುವರು. ಸಂಸದ .ಜಿ. ಎಂ.ಸಿದ್ದೇಶ್ವರ ರಜತ ಮಹೋತ್ಸವ ಕಟ್ಟಡದ ಶಂಕುಸ್ಥಾಪನೆ ನೆರವೇರಿಸುವರು. ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿ.ಬಿ. ರಿಷ್ಯಂತ್ ಸೇರಿದಂತೆ ಗಣ್ಯರು ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳುವರು ಎಂದು ಸುದ್ದಿಗೋಷ್ಠಿಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಬಿ. ಪಾಲಾಕ್ಷಿ ತಿಳಿಸಿದ್ದಾರೆ.

ಇದೇ ವೇಳೆ ನಡೆಯಲಿರುವ ಜಿಲ್ಲಾ ಸಂಘದ 2020-21ನೇ ಸಾಲಿನ ಸರ್ವ ಸದಸ್ಯರ ಮಹಾಸಭೆಯಲ್ಲಿ ಸಂಘದ ವೆಬ್‌ಸೈಟ್ ಉದ್ಘಾಟಿಸಲಾಗುವುದು. ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಏರ್ಪಡಿಸಿರುವ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ 110 ಎಸ್ಸೆಸ್ಸೆಲ್ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳನ್ನು ನಗದು ಬಹುಮಾನ ಮತ್ತು ಪ್ರಮಾಣ ಪತ್ರದೊಂದಿಗೆ ಪುರಸ್ಕರಿಸಲಾಗುವುದು ಎಂದು ಹೇಳಿದರು.

ಪತ್ರಿಕಾಗೋಷ್ಠಿಯಲ್ಲಿ ಸಂಘದ ಮುಖಂಡರಾದ ಸಿ. ಗುರುಮೂರ್ತಿ, ಎಸ್. ಕಲ್ಲೇಶ್ವರಪ್ಪ, ಡಾ.ಎಸ್. ರಂಗನಾಥ, ಬಿ.ಆರ್. ತಿಪ್ಪೇಸ್ವಾಮಿ ಇದ್ದರು.

# ಗಣೇಶನ ಮನೆಯಲ್ಲಿಂದು ಚೌತಿ ! ಮರಳಿದ ವಿದ್ಯಾರ್ಥಿ



**ರಾಣೇಬೆನ್ನೂರು**

ರಾಣೇಬೆನ್ನೂರು, ಮಾ.6- ರಷ್ಯಾ-ಉಕ್ರೇನ್ ಸಂಘರ್ಷ ಪ್ರಾರಂಭವಾಗುತ್ತಲೇ ಚಳಗೇರಿಯ ದಿ. ನವೀನ್ ಕಾಲೇಜು ಜೊತೆಗಾರ ದ್ವಿತೀಯ ವರ್ಷದ ವೈದ್ಯಕೀಯ ವಿದ್ಯಾರ್ಥಿ ರಾಣೇಬೆನ್ನೂರು ನಗರದ ನಿವಾಸಿ ಮಂಜುನಾಥ ಶಿವಲಿಂಗಪ್ಪನವರ ಮಗ ಗಣೇಶ ಇಂದು ಉಕ್ರೇನ್‌ನಿಂದ ನಗರಕ್ಕೆ ಮರಳಿ ಬಂದಿದ್ದು, ಮನೆಯಲ್ಲಿ ಚೌತಿಯ ಸಂಭ್ರಮ ಕಂಡುಬಂದಿತು. ಪತ್ರಕರ್ತರೆದುರು ಅಲ್ಲಿನ ಜನತೆ ನೀಡಿದ ಸಹಾಯ, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ತಮ್ಮ ಬರುವಿಕೆಗೆ ಮಾಡಿದ ಸೌಲಭ್ಯ ಕುರಿತು ವಿವರಿಸಿ, ಮುಂದಿನ ವಿದ್ಯಾಭ್ಯಾಸಕ್ಕೆ ಸೂಕ್ತ ಮಾರ್ಗದರ್ಶನ ಮಾಡುವಂತೆ ಮನವಿ ಮಾಡಿದರು. ವಿಮಾನದಲ್ಲಿ ಬೆಂಗಳೂರು ನಂತರ ರಾಜ್ಯ ಸಾರಿಗೆ ಬಸ್‌ನಲ್ಲಿ ಬಂದ ಗಣೇಶ ಅವರನ್ನು ಸರ್ಕಾರದ ಪರವಾಗಿ ಬಸ್ ನಿಲ್ದಾಣದಲ್ಲಿ ತಹಶೀಲ್ದಾರ್ ಶಂಕರ್ ಸ್ವಾಗತಿಸಿಕೊಂಡರು.

## ಕರಿಬಸವೇಶ್ವರ ಸ್ವಾಮಿ ಪುಣ್ಯಕ್ಷೇತ್ರದಲ್ಲಿ ವಿಶೇಷ ಪೂಜೆಗಳು

ದಾವಣಗೆರೆ - ಹಳೇ ಕುಂದುವಾಡದ ಶ್ರೀ ಸದ್ಗುರು ಕರಿಬಸವೇಶ್ವರ ಸ್ವಾಮಿ ಪುಣ್ಯಕ್ಷೇತ್ರದಲ್ಲಿ ಮಹಾಶಿವರಾತ್ರಿ ಪ್ರಯುಕ್ತ ಇಂದಿನಿಂದ ಇದೇ ದಿನಾಂಕ 8 ರವರೆಗೆ ವಿಶೇಷ ಪೂಜೆಗಳು ನಡೆಯಲಿದ್ದು, ದಿನಾಂಕ 9ರಂದು ಪಳ್ಹಾರ ಪ್ರಸಾದ ನಡೆಯುವುದು.

## ಕಡ್ಲೇಬಾಳಿನಲ್ಲಿಂದು ಸುಬ್ರಹ್ಮಣ್ಯ ಸ್ವಾಮಿ ವಾರ್ಷಿಕೋತ್ಸವ

ದಾವಣಗೆರೆ ತಾಲ್ಲೂಕಿನ ಕಡ್ಲೇಬಾಳು ಗ್ರಾಮದ ಶ್ರೀ ನಾಗ ಸುಬ್ರಹ್ಮಣ್ಯೇಶ್ವರ ಸ್ವಾಮಿಯ ದೇವಾಲಯದಲ್ಲಿ ನಾಲ್ಕನೇ ವಾರ್ಷಿಕೋತ್ಸವವು ಇಂದು ಮತ್ತು ನಾಳೆ ನಡೆಯಲಿದೆ.

ಇಂದು ಪ್ರಾತಃಕಾಲ ಗುರು ಪ್ರಾರ್ಥನೆ, ಮಹಾಗಣಪತಿ ಪೂಜೆ, ಪುಣ್ಯಾಹ ವಾಚನ, ನಾಂದಿ, ಸಹಸ್ರ ಮೋದಕ ಮಹಾಗಣಪತಿ ಹೋಮ, ಆದಿತ್ಯಾದಿ ನವಗ್ರಹ ಹೋಮ, ನಾಗ ಮೂಲಮಂತ್ರ ಹೋಮ, ಪೂರ್ಣಾಹುತಿ ನಂತರ ಪಲ್ಲಕ್ಕಿ ಸೇವೆ ನಡೆಯುವುದು.

ನಾಳೆ ಮಂಗಳವಾರ ಬೆಳಿಗ್ಗೆ 7.30 ಕ್ಕೆ ಸ್ವಾಮಿಗೆ ಪಂಚಾಮೃತ ಅಭಿಷೇಕ, ಕ್ಷೀರಾಭಿಷೇಕ, ರುದ್ರಾಭಿಷೇಕ, ಪವಮಾನಭಿಷೇಕ, ಎಳೆನೀರಿನ ಅಭಿಷೇಕ, ನಂತರ ಅಲಂಕಾರ ಬೆಳಿಗ್ಗೆ 9ಕ್ಕೆ ಸಾಮೂಹಿಕ ಅಶ್ಲೇಷ ಬಲಿಪೂಜೆ, ನಾಗಸುಬ್ರಹ್ಮಣ್ಯ ಮೂಲಮಂತ್ರ ಹೋಮ, 25 ಬ್ರಹ್ಮ ಕಳಸದಿಂದ ಸ್ವಾಮಿಗೆ ಮಹಾಭಿಷೇಕ ಪೂಜೆ, ಅಲಂಕಾರ, ಶ್ರೀ ನಾಗಸುಬ್ರಹ್ಮಣ್ಯಸ್ವಾಮಿಯ ಬ್ರಹ್ಮ ರಥೋತ್ಸವ ನಂತರ ಮಹಾಮಂಗಳಾರತಿ, ಮಹಾಪ್ರಸಾದ ವಿನಿಯೋಗ ನಡೆಯುವುದು.

## ಬಿಎಸ್‌ವೈಗೆ ಪ್ರಶಸ್ತಿ ಪ್ರದಾನ

**(1ನೇ ಪುಟದಿಂದ)** ಆಯನೂರು ಮಂಜು ನಾಥ್,ಅಶೋಕ ನಾಯ್ಕ, ಶ್ರೀಮತಿ ಭಾರತಿ ಶೆಟ್ಟಿ, ಡಿ.ಎಸ್.ಅರುಣ, ಎಸ್. ರುದ್ರೇಗೌಡ, ಮಾಜಿ ಶಾಸಕ ಹೆಚ್.ಎಂ.ಚಂದ್ರಶೇಖರಪ್ಪ, ಅಖಿಲ ಭಾರತ ವೀರಶೈವ ಮಹಾಸಭಾದ ರೇಣುಕ ಪ್ರಸನ್ನ, ಅಖಿಲ ಭಾರತ ವೀರಶೈವ ಮಹಾಸಭಾ ಮಹಿಳಾ ಘಟಕದ ರಾಜ್ಯಾಧ್ಯಕ್ಷರಾದ ಅರುಣಾದೇವಿ, ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ಪರಮಶಿವಯ್ಯ, ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಕ್ಷರಿ, ಮುಖಂಡ ವಿಜಯೇಂದ್ರ, ಚನ್ನವೀರಪ್ಪ, ಗುರುಮೂರ್ತಿ, ನಾಗರಾಜ್, ಜಗದೀಶ್, ಜ್ಯೋತಿ ಪ್ರಕಾಶ್, ಅನಿತಾ ರವಿಶಂಕರ್ ಮತ್ತಿತರರಿದ್ದರು.

# ಸಂಘಟನೆಯಿಂದ ಸಮಾಜಕ್ಕೆ ಉತ್ಸಾಹ, ಶಕ್ತಿ

**(1ನೇ ಪುಟದಿಂದ)** ದಿಂಡೂರು ಮಾತನಾಡಿ, ಅಧಿಕಾರ ಪಡೆದವರು ಮನೆಯಲ್ಲಿ ಕುಳಿತುಕೊಳ್ಳದೆ ಪ್ರತಿ ತಿಂಗಳು ವ್ಯಕ್ತಿ ವಿಕಸನ ಶಿಬಿರ ಮಾಡಬೇಕು ಮತ್ತು ಮಠದ ಆವರಣದಲ್ಲೂ ಸಹ ತಾಲ್ಲೂಕು ಮಟ್ಟದ ವಿಕಸನ ಶಿಬಿರ ಆಯೋಜಿಸುವ ಕಾರ್ಯವಾಗಬೇಕು ಎಂದು ಹೇಳಿದರು.

ಧರ್ಮದರ್ಶಿ ಬಿ. ಸಿ. ಉಮಾಪತಿ ಮಾತನಾಡಿ, ಪಂಚಮಸಾಲಿ ಸಮಾಜ ಕಟ್ಟಿದ ನಂತರದಲ್ಲಿ, ಸಮಾಜದಲ್ಲಿ ಜನತೆಗೆ ಉತ್ತಮ ಗೌರವ ಸಿಗುತ್ತಾ, ಸಾಗಿದೆ. ಅಧಿಕಾರ ಸ್ವೀಕರಿಸಿದ ನಂತರದಲ್ಲಿ ಸಮಾಜದ ಸಂಘಟನೆ ಮಾಡಿ ಸಮಾಜದ ಋಣವನ್ನು ತೀರಿಸುವುದಕ್ಕೆ ಮುಂದಾಗಬೇಕು ಎಂದು ತಿಳಿಸಿದರು.

ರಾಜ್ಯ ಪಂಚಮಸಾಲಿ ಸಮಾಜದ ಕಾರ್ಯಾಧ್ಯಕ್ಷ ಸೋಮನಗೌಡ ಪಾಟೀಲ್ ಮಾತನಾಡಿ, ಪಂಚಮಸಾಲಿ ಸಮಾಜದ ವಚನಾನಂದ ಶ್ರೀಗಳು ಹೈ ಫೈ ಸ್ವಾಮಿಗಳು ಹೌದು ಮತ್ತು ಹೈ ಇನ್‌ಫ್ಲುಯೆನ್ಸ್ ಹೊಂದಿರುವ ಸ್ವಾಮಿಗಳೂ ಹೌದು. ಶ್ರೀಗಳಲ್ಲಿ ಇರುವ ಶಕ್ತಿಯನ್ನು ಬಳಸಿಕೊಂಡು, ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಸದೃಢ ಸಮಾಜವನ್ನು ಕಟ್ಟಲು ಶ್ರಮಿಸುವುದಾಗಿ ಹೇಳಿದರು.

ನೂತನ ರಾಜ್ಯ ಅಧ್ಯಕ್ಷ ಜಿ.ಪಿ. ಪಾಟೀಲ್ ಮಾತನಾಡಿ, ತಮ್ಮ ಅಧಿಕಾರದ ಅವಧಿಯಲ್ಲಿ ತಾಲ್ಲೂಕು ಕೇಂದ್ರದಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದು, ಅವುಗಳ ಜವಾಬ್ದಾರಿಯನ್ನು ಆಯಾ ತಾಲ್ಲೂಕಿನ ಅಧ್ಯಕ್ಷರು ಮತ್ತು ಸದಸ್ಯರಿಗೆ ವಹಿಸಲಾಗುತ್ತದೆ ಮತ್ತು ಸಮಾಜದ ಸಂಘಟನೆಗೆ ಹೆಚ್ಚು ಮಹತ್ವ ನೀಡಲಾಗುತ್ತದೆ ಎಂದು ಹೇಳಿದರು.

ರಾಜ್ಯ ಮಹಿಳಾ ಘಟಕದ ಪ್ರಧಾನ ಕಾರ್ಯದರ್ಶಿ ವಸಂತ್ ಹುಲ್ಲತ್ತಿ ಮಾತನಾಡಿ, ಸಮಾಜ ಒಳ ಜಗಳ, ಸ್ವಯಂ ಸ್ವಾರ್ಥ ಕಿತ್ತಾಟ ಮತ್ತು ಪ್ರತಿಷ್ಠೆ ಇದರಿಂದ ಹೊರ ಬಂದರೆ ಮಾತ್ರ ಸಮಾಜದ ಒಳಿತಿಗಾಗಿ ಮೀಸಲಾತಿ ಪಡೆಯಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಬಿಜಾಪುರ ಜಿಲ್ಲಾ ಅಧ್ಯಕ್ಷ ಗುರುಶರಣ ನಿರಾಣಿ ಹಾಗೂ ನಾಗೇಂದ್ರ ಕಡಕೋಳ, ಮಾಜಿ ಅಧ್ಯಕ್ಷ ಬಾವಿ ಬೆಟ್ಟಪ್ಪ , ಕೊಪ್ಪಳ ಜಿಲ್ಲಾ ಅಧ್ಯಕ್ಷ ಬಸವನಗೌಡ ಇತರರು ಮಾತನಾಡಿದರು.



ನಾನು ಇತರೆ ಸ್ವಾಮಿಗಳ ತರಹದಲ್ಲಿ ಬೀದಿಯಲ್ಲಿ ಓಡಾಟ ಮಾಡಿ ಮೀಸಲಾತಿ ನೀಡಿ ಎಂದು ಹೋರಾಟ ಮಾಡುವ ಸ್ವಾಮಿಯಲ್ಲ. ಮೀಸಲಾತಿಯನ್ನು ಪಡೆಯುವುದಕ್ಕೆ ಕಾನೂನಾತ್ಮಕ ಹೋರಾಟಕ್ಕೆ ಹೆಚ್ಚಿನ ಆದ್ಯತೆ ನೀಡಲಾಗುತ್ತದೆ.

- ಶ್ರೀ ವಚನಾನಂದ ಸ್ವಾಮೀಜಿ

ಈ ಸಂದರ್ಭದಲ್ಲಿ ಪಿ.ಡಿ. ಶಿರೂರು, ನಿಡೋಣಿ, ಜೋತಿ ಪ್ರಕಾಶ್, ಎನ್. ಜಿ. ನಾಗನಗೌಡ್ರು, ರಶ್ಮಿ ಕುಂಕದ, ಕರಿಬಸಪ್ಪ ಕಂಚಿಕೇರಿ ಹರಿಹರ, ಪಟ್ಟಣಶೆಟ್ಟಿ ಹೊನ್ನಾಳಿ, ಗುತ್ತೂರು ಕರಿಬಸಪ್ಪ, ಪ್ರಸನ್ನ ಹೊನ್ನಾಳಿ ಹಾಗೂ ವಿವಿಧ ಜಿಲ್ಲೆಗಳ ಜಿಲ್ಲಾ ಅಧ್ಯಕ್ಷರು ಮತ್ತು ತಾಲ್ಲೂಕು ಅಧ್ಯಕ್ಷರು ಮತ್ತು ಸದಸ್ಯರು ಹಾಜರಿದ್ದರು.


ಯೋಗ ಶಿಬಿರ
YOGA CAMP

ದಿನಾಂಕ : 07.03.2022 ರಿಂದ ಒಂದು ತಿಂಗಳ ಕಾಲ

10 ವರ್ಷ ಮೇಲ್ಪಟ್ಟ ಎಲ್ಲಾ ವಯಸ್ಸಿನ ಸ್ತ್ರೀ, ಪುರುಷ, ವಿದ್ಯಾರ್ಥಿಗಳಿಗಾಗಿ ವಿಶೇಷವಾಗಿ ಶಾರೀರಿಕ, ಮಾನಸಿಕ ಕಾಯಿಲೆಗಳಿಗೆ, ಸಮಸ್ಯೆಗಳಿಗೆ ಸರಳ ವ್ಯಾಯಾಮ, ಸೂರ್ಯ ನಮಸ್ಕಾರ, ಯೋಗಾಸನ, ಪ್ರಾಣಾಯಾಮ, ತ್ರಾಟಕ ಧ್ಯಾನ, ಶಂಖ ಪ್ರಕ್ಷಾಲನ, ಜಲನೇತಿಕ್ರಿಯೆ ಹೇಳಿಕೊಡಲಾಗುವುದು.

ಶಿಬಿರ ಸಮಯ : ಪ್ರತಿದಿನ ಬೆಳಿಗ್ಗೆ - 5.45 ರಿಂದ 7.00 ವರೆಗೆ ಸ್ತ್ರೀ-ಪುರುಷರಿಗಾಗಿ
ಸಂಜೆ 5.15 ರಿಂದ 6.30 ಕೇವಲ ಸ್ತ್ರೀಯರಿಗಾಗಿ
6.30 ರಿಂದ 8.00 ವರೆಗೆ ಸ್ತ್ರೀ-ಪುರುಷರಿಗಾಗಿ

ಆಸಕ್ತರು ತಕ್ಷಣ ಸಂಪರ್ಕಿಸಿ, ಹೆಸರು ನೋಂದಾಯಿಸಿ :

ದಿವ್ಯಯೋಗ ಮಂದಿರ

#198/1, ಜನನಿ ಬಿಲ್ಡಿಂಗ್, 1ನೇ ಮಹಡಿ, 3ನೇ ಮೇನ್, 7ನೇ ಕ್ರಾಸ್, ವೀರೇಶ್ ENT ಆಸ್ಪತ್ರೆ ಎದುರು, ಚೇತನ ಹೋಟೆಲ್ ಹತ್ತಿರ ಪಿಜೆ ಬಡಾವಣೆ, ದಾವಣಗೆರೆ.

ಮೊ : 99726 00713, 94827-31081



ನ್ಯೂ ಹೈಟೆಕ್ ವಯೋವೃದ್ಧರ ಆರೈಕೆ ಕೇಂದ್ರ (ರಿ)

ಸೇವೆಗಳು:

* 24 ಗಂಟೆ ಕೇರ್ ಟೇಕಿಂಗ್
* ಸ್ಪೆಷಲ್ ರೂಮ್ಸ್ ವಿತ್ ಅಟ್ಯಾಚ್ ಬಾತ್ ರೂಂ
* ವೈದ್ಯಕೀಯ ಸೇವೆಗಳು
* ಶುಚಿ & ರುಚಿಯಾದ ಊಟ
* ಪಿಜಿಯೋಥೆರಪಿ
* ಆಯಿಲ್ ಮಸಾಜ್

ಇನ್ನೂ ಇತ್ಯಾದಿ ಸೇವೆಗಳನ್ನು ನೀಡಲಾಗವುದು.

ಮನೆಯಲ್ಲಿ ನೋಡಿಕೊಳ್ಳಲಾಗದ ಮತ್ತು ನಿವೃತ್ತಿ ಹೊಂದಿರುವ ವಯೋವೃದ್ಧರಿಗೆ ಮೇಲೆ ಸೂಚಿಸಿರುವ ಸೇವೆಗಳನ್ನು ನೀಡಿ, ಅವರಿಗೆ ಉತ್ತಮ ಆರೈಕೆ ಮಾಡಲಾಗವುದು.

ಸಂಪರ್ಕಿಸಿ
89711 92936, 76250 15036


## ಮುಖ್ಯಮಂತ್ರಿ ಬೊಮ್ಮಾಯಿಗೆ ವಕೀಲರ ಅಭಿನಂದನೆ

ದಾವಣಗೆರೆ, ಮಾ.6- ರಾಜ್ಯ ವಕೀಲರ ನೆರವಿಗೆ ಬಜೆಟ್‌ನಲ್ಲಿ ಹಣ ಮೀಸಲಿಟ್ಟಿರುವುದಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮತ್ತು ದಾವಣಗೆರೆಯಲ್ಲಿ ಏರ್ ಪೋರ್ಟ್ ಮಾಡುವ ಸಲುವಾಗಿ ಹಣ ಮೀಸಲಿಡುವಂತೆ ಶ್ರಮಿಸಿದ ಸಂಸದ ಜಿ.ಎಂ.ಸಿದ್ದೇಶ್ವರ, ಶಾಸಕ ಎಸ್.ಎ.ರವೀಂದ್ರನಾಥ್ ಹಾಗೂ ಜಿಲ್ಲೆಯ ಎಲ್ಲಾ ಶಾಸಕರಿಗೆ ಜಿಲ್ಲಾ ಬಿಜೆಪಿ ಕಾನೂನು ಪ್ರಕೋಷ್ಠದ ಜಿಲ್ಲಾ ಸಂಚಾಲಕ ಹಾಗೂ ವಕೀಲರ ಸಂಘದ ಉಪಾಧ್ಯಕ್ಷ ಹೆಚ್.ದಿವಾಕರ್, ಕಾನೂನು ಪ್ರಕೋಷ್ಠದ ರಾಜ್ಯ ಸಮಿತಿ ಸದಸ್ಯ ಎ.ಸಿ.ರಾಘವೇಂದ್ರ, ಕೆ. ಹೆಚ್.ಧನಂಜಯ್ ಅಭಿನಂದನೆ ಸಲ್ಲಿಸಿದ್ದಾರೆ.




# ಕೊಂಕಣಿ ಭಾಷೆಯ ಸ್ವತಂತ್ರ ಲಿಪಿಗೆ ಕ್ರಮ ಬೇಕಿದೆ

## ಕೊಂಕಣಿ ಸಾಹಿತ್ಯ, ಸಾಂಸ್ಕೃತಿಕ ಸಂಗಮ, ಬಹುಭಾಷಾ ಕವಿಗೋಷ್ಠಿಯಲ್ಲಿ ಜಸ್ಟಿನ್ ಡಿಸೌಜಾ



ದಾವಣಗೆರೆ, ಮಾ. 6 – ಸಾವಿರಾರು ವರ್ಷಗಳ ಇತಿಹಾಸ ಹೊಂದಿರುವ ಕೊಂಕಣಿ ಭಾಷೆ, ರಾಷ್ಟ್ರಭಾಷೆಯಾಗಿ ಮಾನ್ಯತೆ ಪಡೆದಿದ್ದರೂ ಸಹ ಸ್ವತಂತ್ರ ಲಿಪಿ ಇಲ್ಲ ಎಂಬ ಕೊರತೆ ಎದುರಿಸುತ್ತಿದೆ. ಈ ಬಗ್ಗೆ ಗೋವಾ, ಕರ್ನಾಟಕ ಸರ್ಕಾರಗಳು ಮತ್ತು ರಾಜ್ಯ ಕೊಂಕಣಿ ಸಾಹಿತ್ಯ ಅಕಾಡೆಮಿ ಕಾರ್ಯ ನಿರ್ವಹಿಸಬೇಕಿದೆ ಎಂದು ಸಿದ್ದಗಂಗಾ ವಿದ್ಯಾಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿಸೌಜಾ ಒತ್ತಾಯಿಸಿದ್ದಾರೆ.

ಕರ್ನಾಟಕ ಕೊಂಕಣಿ ಸಾಹಿತ್ಯ ಅಕಾಡೆಮಿ (ಮಂಗಳೂರು), ಶ್ರೀ ಸಿದ್ದಗಂಗಾ ವಿದ್ಯಾಸಂಸ್ಥೆ, ಶ್ರೀಮತಿ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನ (ಸಾಲಿಗ್ರಾಮ) ಇವರ ಸಂಯುಕ್ತಾಶ್ರಯದಲ್ಲಿ ನಗರದ ಸಿದ್ದಗಂಗಾ ವಿದ್ಯಾಸಂಸ್ಥೆಯಲ್ಲಿ ಇಂದು ಆಯೋಜಿಸಲಾಗಿದ್ದ ಕೊಂಕಣಿ ಸಾಹಿತ್ಯ, ಸಾಂಸ್ಕೃತಿಕ ಸಂಗಮ ಮತ್ತು ಬಹುಭಾಷಾ ಕವಿಗೋಷ್ಠಿಯಲ್ಲಿ ಅವರು 'ಕೊಂಕಣಿ ನಾಡು, ನುಡಿ, ಸಂಸ್ಕೃತಿ, ಸಂಸ್ಕಾರ' ಕುರಿತು ಅವರು ಉಪನ್ಯಾಸ ನೀಡಿದರು.

ಕೊಂಕಣಿ ಭಾಷೆ 50 ಸಾವಿರ ವರ್ಷಗಳ ಇತಿಹಾಸ ಹೊಂದಿದೆ. ಬುಡಕಟ್ಟು ಜನರು ಈ ಭಾಷೆ ಮಾತನಾಡುತ್ತಿದ್ದರು. ಮಧ್ಯ ಏಷಿಯಾ - ಪೂರ್ವ ಯುರೋಪ್‌ನಿಂದ ಈ ಭಾಷೆ ಬಂದಿದೆ. ಕೊಂಕಣಿ ಮೇಲೆ ಕನ್ನಡ, ತುಳು, ಮರಾಠಿ ಸೇರಿದಂತೆ ಹಲವು ಭಾಷೆಗಳ ಪ್ರಭಾವ ಇದೆ. ಕೊಂಕಣಿಯಲ್ಲಿ ವಿವಿಧ ಉಪ ಭಾಷೆಗಳಿವೆ ಎಂದರು.

ಕೊಂಕಣಿ ರಾಷ್ಟ್ರೀಯ ಭಾಷೆಯಾಗಿದ್ದರೂ ಅಳಿವಿನ ಅಂಚಿನಲ್ಲಿದೆ. ಮುಂದಿನ ಪೀಳಿಗೆಗೆ ಕೊಂಕಣಿ ಭಾಷೆ ಕಲಿಸಬೇಕಿದೆ ಎಂದ ಅವರು, ಸ್ವತಂತ್ರ ಲಿಪಿ ಹೊಂದಿದರೆ ಮಕ್ಕಳು ಶಾಲೆಗಳಲ್ಲಿ ಕೊಂಕಣಿ ಕಲಿಯಲು ಇನ್ನಷ್ಟು ಅನುಕೂಲವಾಗುತ್ತದೆ ಎಂದರು.

ಕೊಂಕಣಿಗರು ಕಷ್ಟ ಜೀವಿಗಳು ಹಾಗೂ ಬುದ್ಧಿವಂತರು. ವಿಶ್ವದಾದ್ಯಂತ ಹರಡಿ ಎಲ್ಲರ ಜೊತೆ ಬೆರೆತು ಬದುಕುತ್ತಿದ್ದಾರೆ. ಮೃದು ಮಾತು, ಶಾಂತಿಪ್ರಿಯ ಹಾಗೂ ಸಹಬಾಳ್ವೆಗೆ ಹೆಸರಾಗಿದ್ದಾರೆ ಎಂದರು ತಿಳಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಸದಾಶಿವ ಗಡದ ಕೊಂಕಣಿ ಕಲಾವಿದ ಡಾ. ವಸಂತ ಬಾಂದೇಕರ್, ಕೊಂಕಣಿ ಭಾಷಿಗರಲ್ಲಿ ಉನ್ನತ ಸಾಧನೆ ಮಾಡಿದ ಸಾಧಕರ ಪಟ್ಟಿಯೇ ಇದೆ. ಕರ್ನಾಟಕದ ಹಲವಾರು ಪ್ರಸಿದ್ಧ ಧಾರ್ಮಿಕ ತಾಣಗಳಲ್ಲಿ ಕೊಂಕಣಿ ಭಾಷೆಯ ಶಾಸನಗಳು ಕಂಡು ಬಂದಿವೆ ಎಂದವರು ಹೇಳಿದರು.

ದೇವನಾಗರಿ, ಕನ್ನಡ, ಮಲೆಯಾಳಂ, ರೋಮನ್ ಹಾಗೂ ಅರೇಬಿಯನ್ ಲಿಪಿಗಳನ್ನು ಕೊಂಕಣಿಗರು ಪ್ರಮುಖವಾಗಿ ಬಳಸುತ್ತಿದ್ದಾರೆ. ದೇವನಗರಿಯಲ್ಲಿ ಬರೆಯುವ ಕೊಂಕಣಿಗೆ ರಾಷ್ಟ್ರೀಯ ಮಾನ್ಯತೆ ಇದೆ ಎಂದವರು ಹೇಳಿದರು.

ಈ ಸಂದರ್ಭದಲ್ಲಿ ಸಮಾಜ ಸೇವಕರೂ, ಬೆಳ್ಳಿ - ಬಂಗಾರದ ವರ್ತಕರೂ ಆದ ನಲ್ಲೂರು ಲಕ್ಷ್ಮಣರಾವ್ ರೇವಣಕರ್ ಅವರನ್ನು ಸನ್ಮಾನಿಸಲಾಯಿತು.

ಶ್ರೀಮತಿ ಸರಸ್ವತಿ ದಾಸಪ್ಪ ಶೆಣೈ ಪ್ರತಿಷ್ಠಾನದ ಸ್ಥಾಪಕ ಸಾಲಿಗ್ರಾಮ ಗಣೇಶ್ ಶೆಣೈ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

ವೇದಿಕೆಯ ಮೇಲೆ ಕೆ.ಎನ್. ಸ್ವಾಮಿ, ಹುಬ್ಬಳ್ಳಿಯ ಸುರೇಂದ್ರ ವಿ. ಪಾಲನಕರ್, ಆರ್.ಬಿ. ಶೆಣೈ, ಕೊಂಕಣಿ ಸಾಹಿತ್ಯ ಅಕಾಡೆಮಿ ಸದಸ್ಯ ಸಂಚಾಲಕ ನೀಲಾವರ ಭಾಸ್ಕರ ನಾಯಕ್ ಮತ್ತಿತರರು ಉಪಸ್ಥಿತರಿದ್ದರು.

# ದೀಟೂರು - ತುಪ್ಪದಹಳ್ಳಿ ಕೆರೆ : ಕಾಮಗಾರಿ ಪೂರ್ಣ, ಉಳಿದ ಕೆರೆಗಳ ಕಾಮಗಾರಿ ಪ್ರಗತಿ



**ಭರಮಸಾಗರ ಮಾದರಿಯಲ್ಲಿ ಸಿರಿಗೆರೆ ಶ್ರೀಗಳ ಆಶಯದಂತೆ ತುಪ್ಪದಹಳ್ಳಿ ಕೆರೆಗೆ ಸುಸಜ್ಜಿತವಾದ ಕಾರಂಜಿ ನಿರ್ಮಾಣ : ಮಲ್ಲಿಕಾರ್ಜುನ್ ಗುಂಗೆ**

ಜಗಳೂರು, ಮಾ.6- ಜಗಳೂರು ಕ್ಷೇತ್ರದ 57 ಕೆರೆಗಳಿಗೆ ದೀಟೂರಿನಿಂದ 660 ಕೋಟಿ ರೂ. ವೆಚ್ಚದ ನೀರು ತುಂಬಿಸುವ ಯೋಜನೆ ಕಾಮಗಾರಿ ತುಪ್ಪದಹಳ್ಳಿ ಕೆರೆಯವರೆಗೆ ಬಹುತೇಕ ಪೂರ್ಣಗೊಂಡಿದ್ದು, ಉಳಿದ ಕೆರೆಗಳ ಪೈಪ್‌ಲೈನ್ ಕಾಮಗಾರಿ ಭರದಿಂದ ಸಾಗುತ್ತಿದೆ ಎಂದು ರಾಜ್ಯ ಕಾವೇರಿ ನೀರಾವರಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಮಲ್ಲಿಕಾರ್ಜುನ್ ಗುಂಗೆ ಹೇಳಿದರು.

ತಾಲ್ಲೂಕಿನ ತುಪ್ಪದಹಳ್ಳಿ ಕೆರೆಯ ಹತ್ತಿರ ನಡೆಯುವ ಕಾಮಗಾರಿ ಹಾಗೂ ಕೆರೆ ಏರಿಯನ್ನು ಶನಿವಾರ ಸಂಜೆ ವೀಕ್ಷಿಸಿ ನಂತರ ಅವರು ಮಾತನಾಡಿದರು.

ಭರಮಸಾಗರ ಮಾದರಿಯಲ್ಲಿ ಸಿರಿಗೆರೆ ಶ್ರೀಗಳ ಆಶಯದಂತೆ ತುಪ್ಪದಹಳ್ಳಿ ಕೆರೆಗೆ ಸುಸಜ್ಜಿತವಾದ ಕಾರಂಜಿ ನಿರ್ಮಿಸಲು ಸ್ಥಳ ಪರಿಶೀಲನೆ ಮಾಡಲಾಗಿದೆ. ತುಪ್ಪದಹಳ್ಳಿ ಕೆರೆಯು 1200 ಎಕರೆ ವಿಸ್ತೀರ್ಣ ಹೊಂದಿರುವ ನೂರು ವರ್ಷಕ್ಕೂ ಹಳೆಯದಾದ ಕೆರೆಯಾಗಿದ್ದು, ಕೆರೆಯ ಏರಿಯು ಸದೃಢವಾಗಿದೆ. ಜಗಳೂರು ತಾಲ್ಲೂಕಿನ ಕಡೆ ಗ್ಯಾಸ್ ಪೈಪ್‌ಲೈನ್ ಹತ್ತಿರ ಹಾದು ಹೋಗುವ ಸ್ಥಳದಲ್ಲಿ ಪೈಪ್‌ಲೈನ್ ಕಾಮಗಾರಿಗೆ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು ಎಂದರು.

**ಮಾರ್ಚ್ ಅಂತ್ಯದೊಳಗೆ ತುಪ್ಪದಹಳ್ಳಿ ಕೆರೆಗೆ ನೀರು :** ಶಾಸಕ ಎಸ್.ವಿ.ರಾಮಚಂದ್ರ ಮಾತನಾಡಿ, ಸಿರಿಗೆರೆ ಶ್ರೀಗಳ ಮಾರ್ಗದರ್ಶನದಲ್ಲಿ ರೈತರ ಆಶಯದಂತೆ ಈಗಾಗಲೇ ದೀಟೂರಿನಿಂದ ಚಟ್ನಹಳ್ಳಿ ಗುಡ್ಡದವರೆಗೆ ಹಾಗೂ ತುಪ್ಪದಹಳ್ಳಿ ಕೆರೆಯವರೆಗೆ ಪೈಪ್‌ಲೈನ್ ಕಾಮಗಾರಿ ಮುಗಿದಿದ್ದು, ಮಾರ್ಚ್ ಅಂತ್ಯದೊಳಗೆ ತುಪ್ಪದಹಳ್ಳಿ ಕೆರೆಗೆ ಪ್ರಾಯೋಗಿಕವಾಗಿ ನೀರು ಹರಿಸಲು ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದರು.

**ಕೆರೆ ಅಭಿವೃದ್ಧಿಗೆ 8 ಕೋಟಿ ರೂ. ಅನುದಾನ :** ತುಪ್ಪದಹಳ್ಳಿ ಕೆರೆ ಏರಿ ಅಭಿವೃದ್ಧಿ, ಜಂಗಲ್ ಕಟ್ಟಿಂಗ್, ಹೂಳು ತೆಗೆಯಲು 8 ಕೋಟಿ ರೂ. ಅನುದಾನದ ಬಿಡುಗಡೆಯಾಗಿದ್ದು, ಶೀಘ್ರದಲ್ಲೇ ಕಾಮಗಾರಿ ನಡೆಯಲಿದೆ. ಬರುವ ಮುಂಗಾರಿನ ಹೊತ್ತಿಗೆ ತಾಲ್ಲೂಕಿನ ಎಲ್ಲಾ ಕೆರೆಗಳಿಗೆ ನೀರು ತುಂಬಿಸಲಾಗುವುದು ಎಂದು ಶಾಸಕರು ತಿಳಿಸಿದರು.

ಈ ಸಂದರ್ಭದಲ್ಲಿ ನೀರಾವರಿ ಇಲಾಖೆಯ ಮುಖ್ಯ ಇಂಜಿನಿಯರ್ ಶಿವಾನಂದ ಬಣಕಾರ್, ಎಇ ಶ್ರೀಧರ್, ಇಇ ಎಸ್.ಬಿ.ಮಲ್ಲಪ್ಪ, ಗುತ್ತಿಗೆದಾರ ದಯಾನಂದ, ಬಿಜೆಪಿ ಮಂಡಲ ಅಧ್ಯಕ್ಷ ಹೆಚ್.ಸಿ.ಮಹೇಶ್, ಜಿಲ್ಲಾ ಎಸ್ಸಿ ಮೋರ್ಚಾ ಅಧ್ಯಕ್ಷ ಕೃಷ್ಣಮೂರ್ತಿ, ಜಿಲ್ಲಾ ರೈತ ಮೋರ್ಚಾದ ಕಾರ್ಯದರ್ಶಿ ಶಿವಪ್ರಕಾಶ್, ಜಿ.ಪಂ. ಮಾಜಿ ಸದಸ್ಯರಾದ ಸೊಕ್ಕೆ ನಾಗರಾಜ್, ಬಿಜೆಪಿ ಯುವ ಘಟಕದ ಅಧ್ಯಕ್ಷ ಸೂರ್ಯಕಿರಣ್ ಸೇರಿದಂತೆ ಇತರರು ಉಪಸ್ಥಿತರಿದ್ದರು.

## ವಿಪಕ್ಷ ನಾಯಕ ಸ್ಥಾನವನ್ನು ಸಮರ್ಥವಾಗಿ ನಿಭಾಯಿಸಿದ ತೃಪ್ತಿ



ದಾವಣಗೆರೆ, ಮಾ.6- ಮಹಾನಗರ ಪಾಲಿಕೆಯ ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಎರಡು ವರ್ಷಗಳ ಕಾಲ ಸಮರ್ಥವಾಗಿ ನಿಭಾಯಿಸಿದ ತೃಪ್ತಿ ತಮಗಿದೆ ಎಂದು ಎ.ನಾಗರಾಜ್ ತಿಳಿಸಿದ್ದಾರೆ.

ಹಿಂದುಳಿದ ಜಾತಿಯಲ್ಲೊಂದಾದ ಈಡಿಗ ಸಮಾಜಕ್ಕೆ ಸೇರಿದ ತನಗೆ ಜವಾಬ್ದಾರಿಯುತ ಸ್ಥಾನವನ್ನು 2 ವರ್ಷಗಳ ಅವಧಿಗೆ ನೀಡಿ, ಜನಸೇವೆ ಮಾಡಲು ಅನುವು ಮಾಡಿಕೊಟ್ಟ ಶಾಸಕ ಶಾಮನೂರು ಶಿವಶಂಕರಪ್ಪ ಹಾಗೂ ಮಾಜಿ ಸಚಿವ ಶಾಮನೂರು ಮಲ್ಲಿಕಾರ್ಜುನ್ ಅವರ ವಿಶ್ವಾಸಕ್ಕೆ ನಾವು ಯಾವಾಗಲೂ ಚಿರಋಣಿ ಎಂದು ಅವರು ಕೃತಜ್ಞತೆ ಹೇಳಿದ್ದಾರೆ.

ತಮ್ಮ ಅವಧಿಯಲ್ಲಿ ಕೊರೊನಾದಂತಹ ಮಹಾಮಾರಿ ಬಂದಾಗ ಶಾಸಕರು ಮತ್ತು ಮಾಜಿ ಸಚಿವರ ಸಹಕಾರದಿಂದ ಎಲ್ಲಾ ವಾರ್ಡ್‌ಗಳಲ್ಲಿ ಉಚಿತವಾಗಿ ಲಸಿಕೆ ನೀಡಿರುವುದು ಸೇರಿದಂತೆ, ಅನೇಕ ಕೆಲಸಗಳಲ್ಲಿ ಸಹಕಾರ ಕೊಟ್ಟಿರುವುದನ್ನು ಅವರು ಸ್ಮರಿಸಿದ್ದಾರೆ.

# ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಜಂಗೀ ಕುಸ್ತಿ



ಮಲೇಬೆನ್ನೂರು, ಮಾ.6- ಸುಕ್ಷೇತ್ರ ಉಕ್ಕಡಗಾತ್ರಿಯಲ್ಲಿ ಪವಾಡ ಪುರುಷ ಶ್ರೀ ಗುರು ಕರಿಬಸವೇಶ್ವರ ಅಜ್ಜಯ್ಯನ ಶಿವರಾತ್ರಿ ಜಾತ್ರಾ ಮಹೋತ್ಸವದ ಅಂಗವಾಗಿ ಹಮ್ಮಿಕೊಂಡಿದ್ದ ಬಯಲು ಜಂಗೀ ಕುಸ್ತಿಗಳು ಗಮನ ಸೆಳೆದವು.

ಶನಿವಾರ ಮತ್ತು ಭಾನುವಾರ ನಡೆದ ಕುಸ್ತಿಯಲ್ಲಿ ಭಾಗವಹಿಸಿದ್ದ ಬೆಳಗಾವಿ, ವಿಜಾಪುರ, ಶಿವಮೊಗ್ಗ ಮತ್ತು ದಾವಣಗೆರೆ, ಹಾವೇರಿ ಜಿಲ್ಲೆಗಳ 150 ಕ್ಕೂ ಹೆಚ್ಚು ಪೈಲ್ವಾನರು ಗೆಲುವಿಗಾಗಿ ನಡೆಸಿದ ಸೆಣಸಾಟದಲ್ಲಿ ಅಂತಿಮವಾಗಿ ಭದ್ರಾವತಿಯ ಕಿರಣ್ ಪ್ರಥಮ ಬಹುಮಾನಕ್ಕೆ ಭಾಜನರಾದರು. ಹರಿಹರದ ರಾಜು ದ್ವಿತೀಯ ಬಹುಮಾನ ಪಡೆದರು. ಶಾಸಕ ಎಸ್.ರಾಮಪ್ಪ ಅವರ ಪುತ್ರ ಯತಿರಾಜ್ ಪೈಲ್ವಾನ್ ಕೂಡಾ ಕುಸ್ತಿಯಲ್ಲಿ ಭಾಗವಹಿಸಿ, ಮೊದಲ ಸುತ್ತಿನಲ್ಲಿ ಗೆಲುವು ಸಾಧಿಸಿದ್ದರು. ಗದ್ದುಗೆ ಟ್ರಸ್ಟ್ ಕಮಿಟಿ ಕಾರ್ಯದರ್ಶಿ ಸುರೇಶ್ ಅವರು ವಿಜೇತರಿಗೆ ನಗದು ಬಹುಮಾನ ನೀಡಿ, ಸನ್ಮಾನಿಸಿ, ಅಭಿನಂದಿಸಿದರು.

## ದೇವರಹಟ್ಟಿಯಲ್ಲಿ ಇಂದು ರಥೋತ್ಸವ



ದಾವಣಗೆರೆ ತಾಲ್ಲೂಕಿನ ದೇವರಹಟ್ಟಿಯ ಶ್ರೀ ದೇವರಹಟ್ಟಿ ಬಸವಣ್ಣನ ರಥೋತ್ಸವವು ಇಂದು ಸಂಜೆ 6.30 ಗಂಟೆಗೆ ನೆರವೇರಲಿದೆ. ನಾಳೆ ಮಂಗಳವಾರ ಸಂಜೆ 4 ಕ್ಕೆ ಬೆಲ್ಲದ ಬಂಡಿ ಮತ್ತು ಹೋರಿಗಳ ಮೆರವಣಿಗೆ ಜಾತ್ರೆ ಇರುತ್ತದೆ. ಸಂಜೆ 7.30ಕ್ಕೆ ಬಸವಣ್ಣನ ಓಕಳಿ, ಗಂಗಾ ಪೂಜೆ ಕಾರ್ಯಕ್ರಮದ ನಂತರ ದೇವರ ಗುಡಿ ತುಂಬುವುದು. ದಿನಾಂಕ 9ರ ಬುಧವಾರ ಬೆಳಿಗ್ಗೆ 9 ಗಂಟೆಗೆ ಪಲ್ಲಕ್ಕಿ ಸೇವೆ ನಡೆಯಲಿದೆ.

## ಮಲೇಬೆನ್ನೂರಿನಲ್ಲಿಂದು ಬಸವೇಶ್ವರ ರಥೋತ್ಸವ

ಶ್ರೀ ಬಸವೇಶ್ವರ ದೇವರ ಮಹಾರಥೋತ್ಸವವು ಇಂದು ಸಂಜೆ 4 ಗಂಟೆಗೆ ಜರುಗಲಿದೆ. ಇದಕ್ಕೂ ಮುನ್ನ ಶ್ರೀ ಬೀರಲಿಂಗೇಶ್ವರ ಸ್ವಾಮಿ ಕಾರಣಿಕ ನಡೆಯಲಿದೆ.

## ಶಿವನಳ್ಳಿಯಲ್ಲಿ ಇಂದು ಸದ್ಭಾವನಾ ಯಾತ್ರೆ

ಮಹಾಶಿವರಾತ್ರಿಯ ಪ್ರಯುಕ್ತ ಸಂಜೆ 4 ಕ್ಕೆ ಶಿವನಳ್ಳಿಯಲ್ಲಿ ಧ್ವಜಾರೋಹಣ ಮತ್ತು ಸದ್ಭಾವನಾ ಶಾಂತಿಯಾತ್ರೆ ನಡೆಯಲಿದೆ. ಈ ಕಾರ್ಯಕ್ರಮಕ್ಕೆ ಸಂಸ್ಥೆಯ ದಾವಣಗೆರೆ ಸಂಚಾಲಕರಾದ ಈಶ್ವರೀಯ ವಿಶ್ವವಿದ್ಯಾಲಯದ ಬ್ರಹ್ಮಾಕುಮಾರಿ ಲೀಲಾಜಿ ಆಗಮಿಸಲಿದ್ದಾರೆ ಎಂದು ದೊಡ್ಡಬಾತಿ ಸಂಚಾಲಕರಾದ ಬ್ರಹ್ಮಾಕುಮಾರಿ ಗೌರಕ್ಕ ತಿಳಿಸಿದ್ದಾರೆ.



ವಸ್ತು ಪ್ರದರ್ಶನ, ಮಾರಾಟ ಮೇಳ

**ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಸೆಹೆಜ್ ಸಂಘದ ವತಿಯಿಂದ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳವು ಇಂದು ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ನಡೆಯಿತು. ಮಹಿಳೆಯರ ಸೀರೆ, ಬಟ್ಟೆಗಳು, ಡ್ರೆಸೆಸ್, ಆಭರಣ, ಆರ್ಗ್ಯಾನಿಕ್ ವಸ್ತುಗಳು, ತಿಂಡಿ ತಿನಿಸುಗಳು ಹಾಗೂ ಇತರೆ ವಸ್ತುಗಳು ಮಾರಾಟ ಮೇಳದಲ್ಲಿದ್ದವು.**

# ಎಸ್‌ಓಜಿ ಕಾಲೋನಿ : ದುರ್ಗಾಂಬಿಕಾ ಜಾತ್ರೆ ಹಂದರ ಕಂಬ ಪೂಜೆ



ದಾವಣಗೆರೆ, ಮಾ. 6- ನಗರದ 31ನೇ ವಾರ್ಡಿನ ಎಸ್.ಓ.ಜಿ. ಕಾಲೋನಿಯಲ್ಲಿ ಇದೇ ದಿನಾಂಕ 13ರ ಭಾನುವಾರದಿಂದ 16ರ ಬುಧವಾರದವರೆಗೆ ನಡೆಯಲಿರುವ ನಗರದೇವತೆ ಶ್ರೀ ದುರ್ಗಾಂಬಿಕಾ ದೇವಿಯ 5ನೇ ಬಾರಿಯ ಜಾತ್ರಾ ಮಹೋತ್ಸವದ ಹಂದರ ಕಂಬ ಪೂಜೆ ನೆರವೇರಿಸಲಾಯಿತು.

ದೇವಿಗೆ ಬೆಳಿಗ್ಗೆ ಪಂಚಾಮೃತ ಅಭಿಷೇಕ ಸೇರಿದಂತೆ ವಿವಿಧ ಪೂಜೆಗಳನ್ನು ನೆರವೇರಿಸಲಾ ಯಿತು. ಹಂದರ ಪೂಜೆಯ ನಂತರ ಕಂಬ ನಿಲ್ಲಿಸುವ ಗುಣಿಯಲ್ಲಿ ಹಾಲು-ತುಪ್ಪ, ಮುತ್ತು-ಹವಳ, ಪಂಚಲೋಹ ಮತ್ತು ದಕ್ಷಿಣೆ ಹಾಕಿದ ಬಳಿಕ ಹಂದರ ಕಂಬವನ್ನು ನಿಲ್ಲಿಸಲಾಯಿತು.

13ರ ಭಾನುವಾರ ಬೆಳಿಗ್ಗೆ ದೇವಿಗೆ ಪಂಚಾಮೃತ ಅಭಿಷೇಕ, ಕಂಕಣಧಾರಣೆ ಮಾಡಲಾಗುವುದು. ಅಲ್ಲದೇ ಸಾರು ಹಾಕಲಾಗುವುದು. 15ರ ಮಂಗಳವಾರ ದೇವಿಗೆ ವಿಶೇಷ ಪೂಜೆ ನಡೆಯಲಿದೆ. 16ರ ಬುಧವಾರ ಶ್ರೀ ದುರ್ಗಾಂಬಿಕಾ ದೇವಿಯ ಮಹಾಪೂಜೆ ನೆರವೇರಿಸಲಾಗುವುದು. ಅಂದು ರಾತ್ರಿ ಭದ್ರಾವತಿ ತೃಪ್ತಿ ತಂಡದವರಿಂದ ರಸಮಂಜರಿ ಕಾರ್ಯಕ್ರಮ ನಡೆಯಲಿದೆ. 17 ರ ಗುರುವಾರ ಸಂಜೆ 6.30ಕ್ಕೆ ಕಿಶೋರ್ ಜಾದೂಗಾರ್ ತುಮಕೂರು ಇವರ ತಂಡದಿಂದ ಮ್ಯಾಜಿಕ್ ಶೋ ಕಾರ್ಯಕ್ರಮ. 18 ರ ಶುಕ್ರವಾರ ನ್ಯೂ ರಂಜಿತಾ ಡ್ಯಾನ್ಸ್ ಗ್ರೂಪ್ ಇವರಿಂದ ನೃತ್ಯ ಕಾರ್ಯಕ್ರಮ, 19 ರ ಶನಿವಾರ ಭುವನೇಶ್ವರಿ ಕಲಾ ತಂಡ ದಾವಣಗೆರೆ ಇವರಿಂದ 'ಕಿವುಡ ಮಾಡಿದ ಕಿತಾಪತಿ' ಹಾಸ್ಯ ಭರಿತ ನಾಟಕ ಪ್ರದರ್ಶನ, 20 ರ ಭಾನುವಾರ ಜಾತ್ರಾ ಮಹೋತ್ಸವದ ಸಮಾರೋಪ ಸಮಾರಂಭ ಹಾಗೂ ಶಿಲ್ಪ ಮೆಲೋಡೀಸ್, ತುಮಕೂರು ಇವರಿಂದ ರಸಮಂಜರಿ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಟಿ. ಬಸವರಾಜ್, ಹೆಚ್. ತಿಮ್ಮಣ್ಣ, ಕೆ.ವಿ. ಚಂದ್ರಶೇಖರ್, ಕಲ್ಲೇಶಪ್ಪ, ದುರುಗೋಜಪ್ಪ, ಅಂಜಿನಪ್ಪ ಮಾಳಗಿ, ಬಾತಿ ಶಿವಕುಮಾರ್, ಆರ್. ಅಂಜಿನಿ, ಶಿವು, ಮಾರುತಿ, ಪುಟ್ಟಪ್ಪ, ಜಯಪ್ಪ, ನಾಗರಾಜ್, ತರಗಾರ್ ಜಯಣ್ಣ, ಪೂಜಾರ್ ಮಹಾಂತೇಶ್, ಸಂತೋಷ್ ಆಚಾರ್ ಸಿ ಬ್ಲಾಕ್, ಪ್ರಕಾಶ್ ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

## ಕೈದಾಳೆಯಲ್ಲಿ ಇಂದು ಶ್ರೀ ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ

ದಾವಣಗೆರೆ ತಾಲ್ಲೂಕಿನ ಕೈದಾಳೆ ಗ್ರಾಮದ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಮಹಾ ರಥೋತ್ಸವ ಇಂದು ಜರುಗಲಿದೆ. ಬೆಳಿಗ್ಗೆ 8.30 ರಿಂದ 9.30ರವರೆಗೆ ರಥೋತ್ಸವ ಜರುಗಲಿದ್ದು, ಮಧ್ಯಾಹ್ನ 1 ರಿಂದ 5ರವರೆಗೆ ಜವಳ ಕಾರ್ಯಕ್ರಮ, ಸಂಜೆ 5ರಿಂದ ಅಗ್ನಿಕುಂಡ ಪೂಜೆ ಮತ್ತು ಓಕಳಿ ಹಾಗೂ ರಾತ್ರಿ 9.30ರಿಂದ ಹೂವಿನ ಅಡ್ಡಪಲ್ಲಕ್ಕಿ ಉತ್ಸವ, ವೀರಗಾಸೆ, ಮುಂಜಾನೆ 2.30ಕ್ಕೆ ಅಗ್ನಿಕುಂಡ ಪ್ರವೇಶ ಇರಲಿದೆ. ನಾಳೆ ಮಂಗಳವಾರ ಸಂಜೆ 5 ಗಂಟೆಗೆ ಶ್ರೀ ಸ್ವಾಮಿಯ ದಿಬ್ಬಣ ಕಾರ್ಯಕ್ರಮ ನೆರವೇರಲಿದ್ದು, ನಂತರ ರಾತ್ರಿ 9 ಗಂಟೆಗೆ ರಸಮಂಜರಿ ಕಾರ್ಯಕ್ರಮ ನಡೆಯಲಿದೆ.

**ಜನ್ಮದಿನದ ಶುಭಾಶಯಗಳು**

ಇಂದು ಜನ್ಮದಿನದ ಸಂಭ್ರಮದಲ್ಲಿರುವ
**ಕಾರ್ತಿಕ್‌ರಾಜ್ ಎಂ.ಇ.**
(ಮಹಾರಾಜ್ ಸೋಪ್ಸ್ ಇಂಡಸ್ಟ್ರಿ ಪ್ರೈ.ಲಿ.)
ಅವರಿಗೆ ಜನ್ಮದಿನದ ಶುಭಾಶಯಗಳು.





ಶುಭ ಕೋರುವವರು :
**ರಾಜು ಬಸಪ್ಪ**

## ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯ

ಶಿರಮಗೊಂಡನಹಳ್ಳಿ, ನಾಗನೂರು, ಹೊಸ ಬಿಸಲೇರಿ, ಹಳೇ ಬಿಸಲೇರಿ, 6ನೇ ಕಲ್ಲು, 7 ನೇ ಕಲ್ಲು ಮತ್ತು ಬನಶಂಕರಿ ಬಡಾವಣೆ 2 ನೇ ಹಂತ, ಜರೀಕಟ್ಟೆ ಮತ್ತು ಮುದಹದಡಿ, ಜೆ.ಹೆಚ್. ಪಟೇಲ್ ನಗರ, ಡಾಲರ್ಸ್ ಕಾಲೋನಿ ಹಾಗೂ ಹೊಸ ಕುಂದವಾಡ, ಹಳೇ ಕುಂದವಾಡ ಮತ್ತು ಸುತ್ತಮುತ್ತ ಗ್ರಾಮಗಳು. ಹದಡಿ, ಜವಳಘಟ್ಟ, ಕುಕ್ಕುವಾಡ, ಲೋಕಿಕೆರೆ, ಶ್ಯಾಗಲೆ, ಕನಗೊಂಡನಹಳ್ಳಿ, ಆಂಜನೇಯ ನಗರ ಹಾಗೂ ಸುತ್ತಮುತ್ತ ಗ್ರಾಮಗಳಲ್ಲಿ ನಾಳೆ ಮಂಗಳವಾರ ಬೆಳಿಗ್ಗೆ 9 ರಿಂದ ಸಂಜೆ 6 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

ಸ್ಪರ್ಶ್ ಹಾಸ್ಪಿಟಲ್
www.sparshhospital.com
SPARSH HOSPITAL
THE TOUCH OF LIFE
SPARSHVACHANA
The Promise Of A Better Life

ಸ್ಪರ್ಶ ವಚನ (2021 - 2022) ಮಕ್ಕಳಿಗಾಗಿ.
ಕೈ, ಪಾದ ವೈಕ್ಯಲತೆ (ಅಂಗವಿಕಲತೆ) ಮತ್ತು ಬೆನ್ನು ಹುರಿಯ ಶಸ್ತ್ರ ಚಿಕಿತ್ಸಾ ತಪಾಸಣೆ ಶಿಬಿರ (ಸಂಪೂರ್ಣ ಉಚಿತ)

ಶಿಬಿರಕ್ಕೆ ಯಾರೆಲ್ಲರೂ ಬರಬಹುದು ?
ವಯೋಮಿತಿ : ನವಜಾತ ಶಿಶುಗಳಿಂದ ಹಿಡಿದು 14 ವರ್ಷ ವಯಸ್ಸಿನವರು.

ದಿನಾಂಕ: 10 ಮಾರ್ಚ್ 2022 ಸಮಯ: ಬೆಳಗ್ಗೆ 10 ರಿಂದ ಮಧ್ಯಾಹ್ನ 4 ರವರೆಗೆ
ಸ್ಥಳ : ಹೊರ ರೋಗಿಗಳ ಕ್ಲಿನಿಕ್ ವಿಳಾಸ : ಎಸ್. ಎಸ್. ಸ್ಪೆಷಾಲಿಟಿ ಕ್ಲಿನಿಕ್, ಮೋದಿ ಕಾಂಪೌಂಡ್, ಎಂ.ಸಿ.ಸಿ. 'ಎ' ಬ್ಲಾಕ್, ಮೋತಿ ವೀರಪ್ಪ ಕಾಲೇಜು ಹತ್ತಿರ, ದಾವಣಗೆರೆ - 577 002

ನೋಂದಣಿಗಾಗಿ ಕರೆಮಾಡಿ: 96869 29090 / 99800 33277

**ಮುಗ್ಗಿದರಾಗಿಹಳ್ಳಿ ಶ್ರೀಮತಿ ಸುಲೋಚನಮ್ಮ ನಿಧನ**



ದಾವಣಗೆರೆ ಜಿಲ್ಲೆ, ಜಗಳೂರು ತಾಲ್ಲೂಕು, ಮುಗ್ಗಿದರಾಗಿಹಳ್ಳಿ ವಾಸಿ ದಿ.ಕೆಂಚನಗೌಡ್ರು ಇವರು ಧರ್ಮಪತ್ನಿ

**ಶ್ರೀಮತಿ ಸುಲೋಚನಮ್ಮ**

ಇವರು ದಿನಾಂಕ 04.03.2022ರ ಶುಕ್ರವಾರ ಅಬುದಾಬಿಯಲ್ಲಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ ಸುಮಾರು 67 ವರ್ಷ ವಯಸ್ಸಾಗಿತ್ತು. ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಹಾಗು ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಪಾರ್ಥಿವ ಶರೀರವನ್ನು ದಿನಾಂಕ 07.03.2022ರ ಸೋಮವಾರ ಬೆಳಿಗ್ಗೆ 07 ಗಂಟೆಗೆ ಮುಗ್ಗಿದರಾಗಿಹಳ್ಳಿ ಸ್ವಗೃಹದಲ್ಲಿ ಅಂತಿಮ ದರ್ಶನಕ್ಕೆ ಇಡಲಾಗುವುದು. ನಂತರ ಬೆಳಿಗ್ಗೆ 11 ಗಂಟೆಗೆ ಮೃತರ ಸ್ವಂತ ಜಮೀನಿನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು.

ದುಃಖತಪ್ತ ಕುಟುಂಬ ವರ್ಗ: ಮೊ: 99000 94055

॥ ಶ್ರೀ ದೇವರಹಟ್ಟಿ ಬಸವಣ್ಣ ಪ್ರಸನ್ನ ॥

**ಶ್ರೀ ದೇವರಹಟ್ಟಿ ಬಸವಣ್ಣ ದೇವಸ್ಥಾನ ಟ್ರಸ್ಟ್ (ರಿ.)**

ದೇವರಹಟ್ಟಿ ಗ್ರಾಮ, ದಾವಣಗೆರೆ ತಾಲ್ಲೂಕು, ಜಿಲ್ಲೆ



ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ದೇವರಹಟ್ಟಿ ಗ್ರಾಮದಲ್ಲಿರುವ ಶ್ರೀ ದೇವರಹಟ್ಟಿ ಬಸವಣ್ಣ ದೇವಸ್ಥಾನ ಟ್ರಸ್ಟ್, ದೇವರಹಟ್ಟಿ (ರಿ.ನಂ. 351/2018-19) ಇವರ ವತಿಯಿಂದ

**ಶ್ರೀ ದೇವರಹಟ್ಟಿ ಬಸವಣ್ಣನ ರಥೋತ್ಸವ**

**ಇಂದು 07-03-2022ರ ಸೋಮವಾರ**

ಸಂಜೆ 6-30 ಗಂಟೆಗೆ ವಿಜೃಂಭಣೆಯಿಂದ ನೆರವೇರಲಿದೆ. ದಿನಾಂಕ 08.03.2022 ಮಂಗಳವಾರ ಸಂಜೆ 4 ಗಂಟೆಯಿಂದ ಬೆಲ್ಲದ ಬಂಡಿ ಮತ್ತು ಹೋರಿಗಳ ಮೆರವಣಿಗೆ ಜಾತ್ರೆ ಇರುತ್ತದೆ. ಸಂಜೆ 7.30 ಕ್ಕೆ 'ಬಸವಣ್ಣನ ಓಕಳಿ' ಹಾಗೂ 'ಗಂಗಾಪೂಜೆ' ಕಾರ್ಯಕ್ರಮದ ನಂತರ ದೇವರು ಗುಡಿ ತುಂಬುವುದು. ದಿನಾಂಕ 09.03.2022ರ ಬುಧವಾರ ಬೆಳಿಗ್ಗೆ 9 ಗಂಟೆಗೆ 'ಪಲ್ಲಕ್ಕಿ ಸೇವೆ' ನಡೆಯಲಿದೆ. ಸರ್ವ ಭಕ್ತಾದಿಗಳು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ, ಶ್ರೀ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಶ್ರೀ ದೇವರಹಟ್ಟಿ ಬಸವಣ್ಣ ದೇವಸ್ಥಾನ ಟ್ರಸ್ಟ್‌ನವರು ವಿನಂತಿಸಿದ್ದಾರೆ.

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte